ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಸೆಪ್ಟೆಂಬರ್ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 138 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999


1


2


3

1. ಕನ್ನಡ ಪರ ಸಂಘಟನೆಗಳು ಕರೆ ನೀಡಲಾಗಿದ್ದ ಕರ್ನಾಟಕ ಬಂದ್ ಅಂಗವಾಗಿ ದಾವಣಗೆರೆ ಅಶೋಕ ರಸ್ತೆಯಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು. 2. ಕರವೇಯಿಂದ ಗುರುಭವನದ ಮುಂದೆ ಪ್ರತಿಭಟನೆ. 3. ಕಾವೇರಿ ವೇಷಧಾರಿಯೊಂದಿಗೆ ಜಯದೇವ ವೃತ್ತದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು.

## ರಾಜ್ಯಾದ್ಯಂತ ಶಾಂತಿಯುತ ಯಶಸ್ವಿ

ಬೆಂಗಳೂರು, ಸೆ. 29 - ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ನಿಲ್ಲಿಸಿ ಎಂದು ಆಗ್ರಹಿಸಿ ಕನ್ನಡಪರ, ಚಲನಚಿತ್ರೋದ್ಯಮ, ರೈತಪರ ಸಂಘಟನೆಗಳು ನೀಡಿದ್ದ ಬಂದ್ ಶಾಂತಿಯುತವಾಗಿ ಯಶಸ್ವಿಯಾಗಿದೆ.

ಕಾವೇರಿ ಕೊಳ್ಳದ ರೈತರು ಮತ್ತು ಸಾರ್ವಜನಿಕರು ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದ ವೇಳೆಯಲ್ಲೇ, ಕಾವೇರಿ ಜಲ ನಿರ್ವಹಣಾ ಸಮಿತಿ ಮಾಡಿದ್ದ ಶಿಫಾರಸ್ಸನ್ನು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರವು ಇಂದು ದೆಹಲಿಯಲ್ಲಿ ಸಭೆ ಸೇರಿ ಎತ್ತಿಹಿಡಿದಿರುವುದರಿಂದ ತಮಿಳುನಾಡಿಗೆ ಅಕ್ಟೋಬರ್ 15ರವರೆಗೂ ಇಂದಿನಿಂದಲೇ ಮೂರು ಸಾವಿರ ಕ್ಯೂಸೆಕ್ಸ್ ನೀರು ಹರಿಸಬೇಕಾಗಿದೆ.

ಪ್ರಾಧಿಕಾರದ ಆದೇಶವನ್ನು ಪಾಲಿಸದಿದ್ದರೆ, ನಮ್ಮ ಜಲಾಶಯಗಳನ್ನು ಕೇಂದ್ರ ಸರ್ಕಾರ ವಶಕ್ಕೆ ತೆಗೆದುಕೊಳ್ಳುತ್ತದೆ. ಇದು ಅನಿವಾರ್ಯವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಚೆಲ್ಲಿದ್ದಾರೆ.

ನೀರು ಕೊಡಬಾರದೆಂಬುದು ನಮ್ಮ ಅನಿಸಿಕೆ. ನೀರು ಬಿಡದಿದ್ದರೆ ಕೇಂದ್ರ ಸರ್ಕಾರ ನಮ್ಮ ಜಲಾಶಯಗಳನ್ನು ವಶಕ್ಕೆ ಪಡೆಯಬಹುದು. ನ್ಯಾಯಾಂಗ ನಿಂದನೆಯಾಗಲಿದೆ. ಸರ್ಕಾರವನ್ನು ವಜಾ ಮಾಡಲಾಗುತ್ತದೆ. ಆದರೂ ಕಾನೂನು ತಜ್ಞರ ಸಲಹೆ ಪಡೆದು, ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದಿದ್ದಾರೆ.

ಬಂದ್ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಬೇಕಿದ್ದ ವಿಮಾನಗಳು ಹಾಗೂ ಬೆಂಗಳೂರಿನಿಂದ ವಿವಿಧ ರಾಜ್ಯಗಳ ನಗರಗಳಿಗೆ ತೆರಳಬೇಕಿದ್ದ ವಿಮಾನಗಳು ರದ್ದಾಗಿದ್ದವು. ಪ್ರತಿಭಟನಾಕಾರರು ರೈಲುಗಳನ್ನು



**ಕಾವೇರಿ ಕೊಳ್ಳದ ಜಿಲ್ಲೆಗಳಲ್ಲಿ ಬಂದ್ ಪೂರ್ಣವಾಗಿ ಯಶಸ್ವಿಯಾಗಿದ್ದರೆ. ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದಲ್ಲಿ ಬಂದ್ ಮಿಶ್ರ ಪ್ರತಿಫಲ ಕಂಡಿದೆ.**

**ಬುರ್ಖಾ ತೊಟ್ಟು ವಿನೂತನವಾಗಿ ಪ್ರತಿಭಟನೆ ನಡೆಸಿದ ವಾಟಾಳ್ ನಾಗರಾಜ್**

**ಅ.5ರಂದು ರಾಜಧಾನಿಯಿಂದ ಕೆಆರ್‌ಎಸ್ ಜಲಾಶಯದವರೆಗೆ ಕೆಆರ್‌ಎಸ್ ಚಲೋ ರ್‍ಯಾಲಿ ನಡೆಸುವುದಾಗಿ ವಾಟಾಳ್ ಹೇಳಿಕೆ**

ತಡೆಹಿಡಿಯುವ ಹಾಗೂ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವ ಪ್ರಯತ್ನವನ್ನು ಕೆಲವೆಡೆ ಮಾಡಿದರೂ ಯಾವುದೇ ಅಹಿತಕರ ಘಟನೆ ಜರುಗಲಿಲ್ಲ.

ಬಂದ್‌ಗೆ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದರು, ರಾಜಧಾನಿ ಬೆಂಗಳೂರು ಸೇರಿದಂತೆ ಕಾವೇರಿ ಕೊಳ್ಳದ ಭಾಗದಲ್ಲಿ ಸ್ವಯಂ (2ನೇ ಪುಟಕ್ಕೆ)

# ಕಾವೇರಿಗಾಗಿ ದಾವಣಗೆರೆ ಭಾಗಶಃ ಬಂದ್

## ಕನ್ನಡಪರ ಸಂಘಟನೆಗಳಿಂದ ಪ್ರತಿಭಟನೆ, ಸರ್ಕಾರದ ವಿರುದ್ಧ ಆಕ್ರೋಶ

ದಾವಣಗೆರೆ, ಸೆ. 29- ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಕನ್ನಡ ಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ದಾವಣಗೆರೆಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸರ್ಕಾರಿ ಕಚೇರಿಗಳು, ಶಾಲಾ-ಕಾಲೇಜುಗಳು, ಬ್ಯಾಂಕ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಕೆಎಸ್ಸಾರ್ಟಿಸಿ ಬಸ್‌ಗಳೂ ಸಂಚರಿಸಿದವು. ಆದರೆ ಖಾಸಗಿ ಬಸ್‌ಗಳ ಸಂಖ್ಯೆ ವಿರಳವಾಗಿತ್ತು.

ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಬಸ್‌ಗಳು ಹೊರಡಲು ಸಜ್ಜಾಗಿದ್ದರೂ, ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಮಧ್ಯಾಹ್ನ 12ರ ನಂತರವೇ ಒಂದಿಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಿಗೆ ಕೆಲ ಬಸ್‌ಗಳು ಹೊರಟವು.

ಮಂಡಿಪೇಟೆ, ಗಡಿಯಾರ ಕಂಬ, ಚಾಮರಾಜ ಸರ್ಕಲ್ ಬಳಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಪರಿಸ್ಥಿತಿ ಯಥಾಸ್ಥಿತಿಯಲ್ಲಿತ್ತು. ಬಸ್‌ಗಳು ಸಂಚರಿಸಿದವು. ಪ್ರಯಾಣಿಕರಿಗೆ ಯಾವುದೇ ಅನಾನುಕೂಲತೆ ಉಂಟಾಗಲಿಲ್ಲ. ನಗರದಲ್ಲಿ ಆಟೋಗಳ ಸಂಚಾರ ಎಂದಿನಂತಿತ್ತು.

ಬೆಳಿಗ್ಗೆಯಿಂದಲೇ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ವಹಿವಾಟು ನಡೆಸದೇ ಬಂದ್‌ಗೆ ಸಹಕರಿಸುವಂತೆ ಮನವಿ ಮಾಡುತ್ತಿದ್ದರು. ಜಯದೇವ ವೃತ್ತ, ಅಶೋಕ ರಸ್ತೆ, ಹದಡಿ ರಸ್ತೆ, ಗಾಂಧಿ ವೃತ್ತ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಕನ್ನಡ ಪರ ಸಂಘಟನೆಗಳ ಒಕ್ಕೂಟದ ಕೆ.ಜಿ. ಶಿವಕುಮಾರ್, ರೈತ ಮುಖಂಡ (4ನೇ ಪುಟಕ್ಕೆ)

### ಬಂಧನ-ಬಿಡುಗಡೆ

**ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ಗಳ ಓಡಾಟಕ್ಕೆ ಅಡ್ಡಿಪಡಿಸಲಾಗುತ್ತಿದೆ ಎಂದು ಕಾರ್ಮಿಕ ಮುಖಂಡ ಹೆಚ್.ಜಿ. ಉಮೇಶ್, ಐರಣಿ ಚಂದ್ರು, ಐಗೂರು ಸುರೇಶ್ ಸೇರಿದಂತೆ 9 ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಪ್ರತಿಭಟನೆ ನಡೆಸಲು ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ತೆರಳುತ್ತಿದ್ದ ರೈತ ಮುಖಂಡರನ್ನೂ ಪೊಲೀಸರು ಜೀಪಿನಲ್ಲಿಯೇ ಕರೆದೊಯ್ದ ಘಟನೆ ನಡೆಯಿತು. ಈ ವೇಳೆ ಜೀಪಿನಲ್ಲಿ ಬರಲು ವಿರೋಧಿಸಿದ ರೈತ ಮುಖಂಡರು ಬೈಕ್ ಮೂಲಕ ಜಿಲ್ಲಾಧಿಕಾರಿ ಕಚೇರಿ ಬಳಿ ತೆರಳಿದರು.**

### ಕರವೇಯಿಂದ ಸರ್ಕಾರಗಳ ಸಮಾರಾಧನೆ

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಗರದ ಗುರು ಭವನದ ಬಳಿ ರಾಜ್ಯದ ಮುಖ್ಯಮಂತ್ರಿ, ಪ್ರಧಾನಿ ಹಾಗೂ ತಮಿಳು ನಾಡು ಮುಖ್ಯಮಂತ್ರಿಗಳ ಭೂತ ದಹನ ಮಾಡಿ ನಂತರ ಅಣಕು ಕೈಲಾಸ ಸಮಾರಾಧನೆ ನಡೆಸಲಾಯಿತು.

ಈ ವೇಳೆ ಕರವೇ ಜಿಲ್ಲಾ ಅಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ರಾಜ್ಯದ 28 ಸಂಸದರು ಕಾವೇರಿ ವಿಚಾರದಲ್ಲಿ ದನಿ ಎತ್ತದೇ ಇರುವುದು ಖಂಡನೀಯ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಕ್ಷಣ ತಮಿಳುನಾಡು ಮುಖ್ಯಮಂತ್ರಿ ಸ್ಟ್ಯಾಲಿನ್ ಜೊತೆ ಮತ್ತು ರಾಹುಲ್ ಗಾಂಧಿ ಜೊತೆ ಸೌಹಾರ್ದತವಾಗಿ ಮಾತನಾಡಿ, ಬಗೆಹರಿಸುವ ಕೆಲಸ ಮಾಡಬೇಕಾಗಿದೆ. ಇದರ ಜೊತೆಗೆ ನಾಲ್ಕು ರಾಜ್ಯದ ಮುಖ್ಯಮಂತ್ರಿಗಳ ಸಭೆ ಕರೆದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಧ್ಯಪ್ರವೇಶಿಸಿ ಕಾವೇರಿ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದರೆ ಕೇಂದ್ರ ಸರ್ಕಾರದ ವಿರುದ್ಧ ಅಕ್ಟೋಬರ್ 10ರಂದು ದೆಹಲಿ ಚಲೋ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಮಂಜುಳಮ್ಮ, ಶಾಂತಮ್ಮ, ಸಾಕಮ್ಮ, ಗೋಪಾಲ್ ದೇವರಮನಿ, ಬ್ಯಾಟರಿ ಜಬಿವುಲ್ಲಾ, ಜಿ.ಎಸ್. ಸಂತೋಷ್, ಜಬಿವುಲ್ಲಾಖಾನ್, ಭಾಷಾ ದಾದರ್, ನಿಜಾಮ್ ಬಿಲಾಲ್, ದಾದಾಪೀರ್, ಪೈಲ್ವಾನ್,ತನ್ವೀರ್, ಗಿರೀಶ್ ಕುಮಾರ್, ರವಿಕುಮಾರ್, ಲೋಕೇಶ್, ಈಶ್ವರ್, ಆಟೋ ರಫೀಕ್, ಖಾದರ್ ಭಾಷಾ, ಧೀರೇಂದ್ರ ನಾಗರಾಜ್, ತುಳಸಿರಾಮ್, ಬಸವರಾಜ್, ಸಂಜು, ವಿನಯ್, ಸಾಗರ್, ಅಕ್ಷಯ್, ಗುರುಮೂರ್ತಿ, ಅಲ್ಲಾಭಕ್ಷಿ ಉಪಸ್ಥಿತರಿದ್ದರು.

## ಇ-ಎಫ್.ಐ.ಆರ್. ಜಾರಿಗೆ ಆಯೋಗ ಶಿಫಾರಸ್ಸು

ನವದೆಹಲಿ, ಸೆ. 29- ಹಂತ ಹಂತವಾಗಿ ಇ-ಎಫ್.ಐ.ಆರ್. ನೋಂದಣಿ ಸೌಲಭ್ಯ ಕಲ್ಪಿಸುವಂತೆ ಕಾನೂನು ಆಯೋಗ ಶಿಫಾರಸ್ಸು ಮಾಡಿದೆ.

ಕಳೆದ ವಾರ ಕಾನೂನು ಆಯೋಗ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಶುಕ್ರವಾರದಂದು ಸಾರ್ವಜನಿಕರಿಗೆ ಬಹಿರಂಗ ಪಡಿಸಲಾಗಿದೆ. ಇ-ಎಫ್.ಐ.ಆರ್. ದಾಖಲಿಸಲು ಕೇಂದ್ರೀಕೃತ ರಾಷ್ಟ್ರೀಯ ಪೋರ್ಟಲ್ ರೂಪಿಸಬೇಕು. ಮೊದಲ ಹಂತದಲ್ಲಿ ಮೂರು ವರ್ಷಗಳವರೆಗೆ ಜೈಲು ಶಿಕ್ಷೆಯಾಗುವ ಪ್ರಕರಣಗಳ ಇ-ಎಫ್.ಐ.ಆರ್. ದಾಖಲಿಸಲು ಅವಕಾಶ ಕಲ್ಪಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ.

ಎಫ್.ಐ.ಆರ್. ದಾಖಲಿಸುವಲ್ಲಿ ಆಗುತ್ತಿರುವ ವಿಳಂಬ ತಪ್ಪಿಸಲು ಈ ಕ್ರಮ ನೆರವಾಗಲಿದೆ. ಅಲ್ಲದೇ ನಾಗರಿಕರು ಕ್ಷಿಪ್ರವಾಗಿ ಅಪರಾಧಗಳ ಬಗ್ಗೆ ಮಾಹಿತಿ ನೀಡಲು ಅವಕಾಶ ಸಿಗುತ್ತದೆ (4ನೇ ಪುಟಕ್ಕೆ)

## ಮಹಿಳಾ ಮೀಸಲಾತಿ ಮಸೂದೆಗೆ ರಾಷ್ಟ್ರಪತಿ ಅಂಕಿತ

ನವದೆಹಲಿ, ಸೆ. 29 – ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಒಪ್ಪಿಗೆ ನೀಡಿದ್ದಾರೆ. ಗುರುವಾರದಂದು ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಇದರೊಂದಿಗೆ ಈ ಮಸೂದೆಯು ಸಂವಿಧಾನದ 106ನೇ ತಿದ್ದುಪಡಿ ಕಾಯ್ದೆ ಎಂದು ಕರೆಸಿಕೊಳ್ಳಲಿದೆ.

# ಟಾಪರ್‌ಗಳ ವೈಭವೀಕರಣ ಬೇಡ

## ಕೋಚಿಂಗ್ ಕೇಂದ್ರಗಳಿಗೆ ರಾಜಸ್ಥಾನದ ಸರ್ಕಾರದ ಸೂಚನೆ

ಜೈಪುರ, ಸೆ. 29- ಟಾಪರ್‌ಗಳನ್ನು ವೈಭವೀಕರಿಸಬಾರದು, ಸಾಮಾನ್ಯ ಟೆಸ್ಟ್ ಫಲಿತಾಂಶಗಳನ್ನು ಗೌಪ್ಯವಾಗಿಡಬೇಕು, ವಿದ್ಯಾರ್ಥಿ ರ್‍ಯಾಂಕುಗಳ ಆಧಾರದ ಮೇಲೆ ವರ್ಗೀಕರಣ ಮಾಡಬಾರದು ಹಾಗೂ ಕೋಚಿಂಗ್ ಕೇಂದ್ರಗಳಿಂದ ಸುಲಭವಾಗಿ ನಿರ್ಗಮಿಸುವ ಸೌಲಭ್ಯ ನೀಡಬೇಕು ಎಂದು ರಾಜಸ್ಥಾನ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ.

ರಾಜ್ಯದ ಕೋಚಿಂಗ್ ಕೇಂದ್ರಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಮಾರ್ಗಸೂಚಿ ರೂಪಿಸಲಾಗಿದೆ. ಶಿಕ್ಷಣ ಕಾರ್ಯದರ್ಶಿ ಭವಾನಿ ಸಿಂಗ್ ದೆತಾ ಅವರ ನೇತೃತ್ವದಲ್ಲಿ 15 ಸದಸ್ಯರ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿ ಮಾರ್ಗಸೂಚಿಗಳನ್ನು ರೂಪಿಸಿದೆ.

ರಾಜಸ್ಥಾನದ ಕೋಟಾ ಕೋಚಿಂಗ್ ಕೇಂದ್ರಗಳ ತಾಣವಾಗಿದೆ. ಈ ವರ್ಷ ಇದುವರೆಗೂ 23 ವಿದ್ಯಾರ್ಥಿಗಳು ಕೋಟಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೋಚಿಂಗ್ ಸಂಸ್ಥೆಗಳು ಹಾಗೂ ಇತರೆ ಸಂಬಂಧಿಸಿದವರ ಜೊತೆ ಸಮಾಲೋಚನೆ ನಡೆಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಪ್ರವೇಶಕ್ಕಾಗಿ ಒಂಭತ್ತನೇ ತರಗತಿಗಿಂತ ಕಡಿಮೆ ಹಂತದವರನ್ನು ಸೇರ್ಪಡೆ ಮಾಡಿಕೊಳ್ಳದಂತೆ ಕೋಚಿಂಗ್ ಕೇಂದ್ರಗಳ ಮೇಲೆ ನಿರ್ಬಂಧ ಹೇರಲಾಗಿದೆ. ಈಗಾಗಲೇ ನೋಂದಾಯಿತರಾಗಿರುವ ಒಂಭತ್ತನೇ ತರಗತಿಗಿಂತ ಕೆಳಗಿನವರು, ಕೋಚಿಂಗ್ ಕೇಂದ್ರ ಬಿಡಲು ಬಯಸಿದರೆ 120 ದಿನಗಳಲ್ಲಿ ಹಣ ಮರಳಿಸಬೇಕು ಎಂದು ತಿಳಿಸಲಾಗಿದೆ. ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವಾರದ ರಜೆ ನೀಡಬೇಕು, ರಜೆಯ ಮರು ದಿನ ಪರೀಕ್ಷೆ ನಡೆಸಬಾರದು ಎಂದೂ (2ನೇ ಪುಟಕ್ಕೆ)

**ಕೋಚಿಂಗ್ ಕೇಂದ್ರಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದಿಂದ ಮಾರ್ಗಸೂಚಿ**

**ಮಾರ್ಗಸೂಚಿಯ ಪ್ರಮುಖ ಅಂಶಗಳು :**

- ಕಡ್ಡಾಯವಾಗಿ ವಾರದ ರಜೆ ನೀಡಬೇಕು.
- ರಜೆಯ ಮರು ದಿನ ಪರೀಕ್ಷೆ ನಡೆಸಬಾರದು.
- 120 ದಿನಗಳಲ್ಲೇ ಹೊರ ಹೋಗಲು ಬಯಸಿದರೆ ರೀಫಂಡ್
- ರ್‍ಯಾಂಕಿಂಗ್ ಆಧಾರದ ಮೇಲೆ ತರಗತಿಗಳ ವಿಂಗಡಣೆ ಮಾಡಬಾರದು
- ವಾರದ ಸಾಧನೆಯ ಆಧಾರದ ಮೇಲೆ ಅವರ ತಂಡಗಳನ್ನು ವರ್ಷದ ಮಧ್ಯದಲ್ಲೇ ಬದಲಿಸಬಾರದು
- ಸಾಮಾನ್ಯ ಟೆಸ್ಟ್‌ಗಳ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಬಾರದು
- ಅಂಕ ಪಟ್ಟಿಯನ್ನು ಗೌಪ್ಯವಾಗಿರಿಸಬೇಕು
- ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಕೌನ್ಸೆಲಿಂಗ್

# ವಚತಿ ಪ್ರಕರಣ : 200ಕ್ಕೂ ಹೆಚ್ಚು ಜನರಿಗೆ ಶಿಕ್ಷೆ

ಚೆನ್ನೈ, ಸೆ. 29 – ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರ ಸೇರಿದಂತೆ ಹಲವು ದೌರ್ಜನ್ಯ ಎಸಗಿದ ವಚತಿ ಪ್ರಕರಣಕ್ಕೆ ಸಂಬಂಧಿಸಿದಂತೆ 200ಕ್ಕೂ ಹೆಚ್ಚು ಜನರಿಗೆ ವಿಚಾರಣಾ ನ್ಯಾಯಾಲಯ ಶಿಕ್ಷೆ ವಿಧಿಸಿದ್ದನ್ನು ಮದ್ರಾಸ್ ಹೈಕೋರ್ಟ್ ಎತ್ತಿ ಹಿಡಿದಿದೆ.

1992ರಲ್ಲಿ ಧರ್ಮಪುರಿ ಜಿಲ್ಲೆಯ ವಚತಿ ಹಳ್ಳಿಯಲ್ಲಿ ಗಂಧದ ಕಳ್ಳಸಾಗಣೆ ಪ್ರಕರಣದಲ್ಲಿ ದಾಳಿ ನಡೆಸಿದ ಸಂದರ್ಭದಲ್ಲಿ ಎಸಗಲಾದ ದೌರ್ಜನ್ಯಗಳು ತಮಿಳುನಾಡಿನಾದ್ಯಂತ ಆಘಾತಕ್ಕೆ ಕಾರಣವಾಗಿತ್ತು. ಸಿ.ಬಿ.ಐ. ಈ ಪ್ರಕರಣದ ತನಿಖೆ ನಡೆಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳೂ ಸೇರಿದಂತೆ 215 ಜನರಿಗೆ ಧರ್ಮಪುರಿಯ ವಿಚಾರಣಾ ನ್ಯಾಯಾಲಯ 2011ರಲ್ಲಿ 10 ವರ್ಷಗಳವರೆಗಿನ ಜೈಲು ಶಿಕ್ಷೆ ವಿಧಿಸಿತ್ತು.

ಸೆಪ್ಟೆಂಬರ್ 29, 2011ರಲ್ಲಿ ವಿಚಾರಣಾ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಇದಾಗಿ ಸರಿಯಾಗಿ 12 ವರ್ಷಗಳ ನಂತರ ಹೈಕೋರ್ಟ್ ತೀರ್ಪು ನೀಡಿದೆ.

ಲೈಂಗಿಕ ದೌರ್ಜನ್ಯಕ್ಕೆ ಗುರಿಯಾದ 18 ಮಹಿಳೆಯರಿಗೆ ತಕ್ಷಣವೇ 10 ಲಕ್ಷ ರೂ. ಪರಿಹಾರ ನೀಡಬೇಕೆಂದು ನ್ಯಾಯಮೂರ್ತಿ ಪಿ. ವೇಲುಮುರುಗನ್ ನಿರ್ದೇಶನ ನೀಡಿದ್ದಾರೆ.

ಈ ಹಣದ ಪೈಕಿ ಅರ್ಧದಷ್ಟನ್ನು ದೌರ್ಜನ್ಯ ಎಸಗಿದವರಿಂದ ವಸೂಲಿ ಮಾಡಬೇಕು ಎಂದೂ ನ್ಯಾಯಾಲಯ ಹೇಳಿದೆ.

ದೌರ್ಜನ್ಯಕ್ಕೆ ಗುರಿಯಾದ ಮಹಿಳೆಯರಿಗೆ ಇಲ್ಲವೇ ಅವರ ಕುಟುಂಬದವರಿಗೆ ಸರ್ಕಾರ ಸ್ವಯಂ ಉದ್ಯೋಗ ಇಲ್ಲವೇ ಶಾಶ್ವತ ಉದ್ಯೋಗಕ್ಕೂ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ನ್ಯಾಯಾಲಯ ಹೇಳಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿನ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾ ಅರಣ್ಯಾಧಿಕಾರಿಗಳು ನಿರ್ಲಕ್ಷ್ಯ ತೋರಿದ್ದರು. ಇವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದೂ ಹೈಕೋರ್ಟ್ ತಿಳಿಸಿದೆ.

ದಾಳಿ ನಡೆಸಿದ ಸಂದರ್ಭದಲ್ಲಿ ನಿಜವಾದ ಗಂಧದ ಕಳ್ಳಸಾಗಣೆದಾರರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ನಿಜವಾದ ಕಳ್ಳಸಾಗಣೆದಾರರು ಹಾಗೂ ದೊಡ್ಡವರನ್ನು ರಕ್ಷಿಸುವ ಸಲುವಾಗಿ ದಾಳಿಯ ದೊಡ್ಡ ನಾಟಕವನ್ನು ನಡೆಸಲಾಯಿತು. ಕಂದಾಯ, ಪೊಲೀಸ್ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಅಮಾಯಕ ಬುಡಕಟ್ಟು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ಆದರೆ, ಆಗಿನ ಎ.ಐ.ಎ.ಡಿ.ಎಂ.ಕೆ. ಸರ್ಕಾರ ಬುಡಕಟ್ಟು ಮಹಿಳೆಯರ ರಕ್ಷಣೆಗೆ ವಿಫಲವಾಗಿದೆ. ಸರ್ಕಾರ ಕೇವಲ ಆರೋಪಿತ ಅಧಿಕಾರಿಗಳನ್ನು ರಕ್ಷಿಸಿತು. ನಿಜವಾದ ಕಳ್ಳಸಾಗಣೆದಾರರ ಪತ್ತೆ ಮಾಡಲು ವಿಫಲವಾಯಿತು ಎಂದೂ ನ್ಯಾಯಾಲಯ ತಿಳಿಸಿದೆ.

ಈ ಪ್ರಕರಣದಲ್ಲಿ 126 ಅರಣ್ಯಾಧಿಕಾರಿಗಳು, 84 ಪೊಲೀಸರು ಹಾಗೂ ಐವರು ಕಂದಾಯ ಅಧಿಕಾರಿಗಳು ದೋಷಿಗಳು ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಒಟ್ಟು 269 ಆರೋಪಿಗಳ ಪೈಕಿ 54 ಜನ ವಿಚಾರಣೆ ವೇಳೆ ಮೃತಪಟ್ಟಿದ್ದಾರೆ.

**ಬುಡಕಟ್ಟು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಪೊಲೀಸ್, ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿ, ಸಿಬ್ಬಂದಿಗೆ ಶಿಕ್ಷೆ**

# ಸರ್ಕಾರದ ಸೌಲಭ್ಯ ಪಡೆದು ಸ್ವಾವಲಂಬಿ ಜೀವನ ನಡೆಸಿ

## ಹರಿಹರದಲ್ಲಿ ಅಮೃತ ಯೋಜನೆಯಡಿ ಸೌಲಭ್ಯಗಳ ವಿತರಿಸಿದ ಸಂಸದ ಜಿ.ಎಂ. ಸಿದ್ದೇಶ್ವರ

ಹರಿಹರ, ಸೆ,29- ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದರು.

ನಗರದ ನಗರಸಭೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅಮೃತ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹೊಲಿಗೆ ಯಂತ್ರ, ಜೆರಾಕ್ಸ್, ಲ್ಯಾಪ್‌ಟಾಪ್, ಟ್ಯಾಬ್ ವಿತರಿಸಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ನೂರು ದಿನ ತುಂಬಿದರೂ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ಮಾಡುತ್ತಿಲ್ಲ. ಹಿಂದಿನ ಬಸವರಾಜ ಬೊಮ್ಮಾಯಿ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಈಗ ಉದ್ಘಾಟನೆಯಾಗುತ್ತಿವೆ ಎಂದರು.

ಬೊಮ್ಮಾಯಿ ಆಡಳಿತದ ಕಾಲದಲ್ಲಿ ಪ್ರತಿಯೊಂದು ನಗರಕ್ಕೆ ನಗರೋತ್ಥಾನ ಅಡಿಯಲ್ಲಿ 30 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದರು. ಅದರಲ್ಲಿ ಶೇ. 24 ರಷ್ಟು ಆರ್ಥಿಕವಾಗಿ ಹಿಂದುಳಿದಿರುವ ವರ್ಗದವರಿಗೆ ಬಳಕೆ ಮಾಡಬೇಕೆಂಬ ಉದ್ದೇಶವಿದೆ. ಆ ಯೋಜನೆಯ ಮೂಲಕ ಬಡವರಿಗೆ ಉಪಕರಣಗಳನ್ನು ವಿತರಿಸಲಾಗುತ್ತಿದೆ. ಇದರಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರ ಇಲ್ಲ ಎಂದರು.

ಕೇಂದ್ರ ಸರ್ಕಾರ ರಾಜ್ಯದಲ್ಲಿನ ಜನತೆಗೆ ಅನೇಕ ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸುತ್ತಿದ್ದು ಅದರಲ್ಲಿ ಸ್ವಚ್ಛತೆ, ಆದರ್ಶ ಗ್ರಾಮ ಯೋಜನೆ ಅಡಿಯಲ್ಲಿ ಮನೆ ನಿರ್ಮಾಣ, ಸ್ವ ನಿಧಿ ಯೋಜನೆ ಅಡಿಯಲ್ಲಿ ಬೀದಿ ಬದಿಯ ವ್ಯಾಪಾರಿಗಳಿಗೆ ಜಾಮೀನು ಇಲ್ಲದೆ 10 ಸಾವಿರ ರೂಪಾಯಿ ಸಾಲ ಸೌಲಭ್ಯ ಮತ್ತಿತರೆ ಯೋಜನೆಗಳು ಸೇರಿವೆ ಎಂದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ನಗರಸಭೆಯಲ್ಲಿ ಆಡಳಿತ ಕೈ ತಪ್ಪಿದೆ. ನಾನು ಶಾಸಕನಾಗಿ ನಾಲ್ಕು ತಿಂಗಳು ಕಳೆದರೂ ಇದುವರೆಗೂ ಸೌಜನ್ಯಕ್ಕಾದರು ನನಗೆ ನಗರಸಭೆ ಅಧಿಕಾರಿಗಳು ಭೇಟಿ ಮಾಡಿಲ್ಲ. ನಗರಸಭೆ ಆಡಳಿತದ ಬಗ್ಗೆ ಜನರು ರೋಸಿ ಹೋಗಿದ್ದಾರೆ ಎಂದರು.

ಪೌರಾಯುಕ್ತ ಐಗೂರು ಬಸವರಾಜ್ ಅವರು ವಾರ್ಡ್‌ಗೆ ಭೇಟಿ ನೀಡಿದರೆ ಜನರ ಕಷ್ಟ ತಿಳಿಯಲು ಸಾಧ್ಯ. ಕಚೇರಿಯಲ್ಲಿ ಕಾಲ ಹಾಕಿದರೆ ಜನರ ಕಷ್ಟ ಅರಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ, ಅಮೃತ ನಗರೋತ್ಥಾನ ಯೋಜನೆ ಹಂತ 4 ಮತ್ತು ಶೇ. 24.10 ರ ಯೋಜನೆಯಡಿ (4ನೇ ಪುಟಕ್ಕೆ)



# 1.5 ಲಕ್ಷ ಮತಗಳಿಂದ ಗೆಲುವಿನ ವಿಶ್ವಾಸ

## ಕಾಂಗ್ರೆಸ್‌ನಿಂದ ಟಿಕೆಟ್ ಸಿಗುವ ಭರವಸೆ ಇದೆ : ವಿನಯ್‌ಕುಮಾರ್



ದಾವಣಗೆರೆ, ಸೆ. 29 - ಮುಂಬರುವ ಚುನಾವಣೆಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಸಿಗುವ ಭರವಸೆ ಇದೆ. 1.5 ಲಕ್ಷಕ್ಕೂ ಹೆಚ್ಚು ಮತಗಳಿಂದ ಗೆಲ್ಲುವ ವಿಶ್ವಾಸವೂ ಇದೆ ಎಂದು ಲೋಕಸಭಾ ಚುನಾವಣೆಯ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್‌ಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ವತಿಯಿಂದ ನಡೆಸಲಾದ ಸಮೀಕ್ಷೆಯಲ್ಲಿ ನನ್ನ ಹೆಸರು ಮುಂಚೂಣಿಯಲ್ಲಿದೆ. ವರಿಷ್ಠರ ಸೂಚನೆಯ ಮೇರೆಗೆ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡಿದ್ದೇನೆ ಎಂದರು.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಶೇ.70ರಷ್ಟು ಅಹಿಂದ ಮತದಾರರಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರಿಗೆ ಮುಂಚೆಯೇ ಟಿಕೆಟ್ ಸಿಕ್ಕಿದ್ದರೆ ಗೆಲ್ಲುವ ಅವಕಾಶ ಇತ್ತು ಎಂದು ವಿನಯ್ ಕುಮಾರ್ ಅಭಿಪ್ರಾಯ ಪಟ್ಟರು.

ಚನ್ನಯ್ಯ ಒಡೆಯರ್ ಅವರ ನಂತರ ಅಹಿಂದ ವರ್ಗದವರಿಗೆ ಕಾರಣಾಂತರಗಳಿಂದ ಅವಕಾಶ ಸಿಕ್ಕಿಲ್ಲ. ಈ ಬಾರಿ ನನಗೆ ಟಿಕೆಟ್ ಸಿಗಲಿದೆ ಹಾಗೂ ಕನಿಷ್ಠ 1.5-2 ಲಕ್ಷ ಮತಗಳಿಂದ ಗೆಲ್ಲುವ ಅಚಲ ವಿಶ್ವಾಸ ಇದೆ ಎಂದು ತಿಳಿಸಿದರು.

ಕ್ಷೇತ್ರದ ಯುವಕರ ಸಬಲೀಕರಣ ಹಾಗೂ ಜನರ ಸ್ವಾವಲಂಬಿ ಜೀವನಕ್ಕಾಗಿ ಬಿಜೆಪಿ ಸಂಸದರು ಕಳೆದ 30 ವರ್ಷಗಳಲ್ಲಿ ಏನೂ ಕೆಲಸ ಮಾಡಿಲ್ಲ. ದಾವಣಗೆರೆ ಕ್ಷೇತ್ರದಿಂದಲೇ ಬಿಜೆಪಿ ಹಟಾವೋ ಆರಂಭವಾಗಲಿದೆ. ಬಿಜೆಪಿಯ ವಿಚಾರಗಳು ಈಗ ಅವಧಿ ಮೀರಿದವಾಗಿವೆ. ರಾಷ್ಟ್ರೀಯತೆ ಹಾಗೂ ಕೋಮುವಾದದಂತಹ ವಿಚಾರಗಳಿಂದ ಮತ ಗಳಿಸಲು ಸಾಧ್ಯವಿಲ್ಲ ಎಂದವರು ಹೇಳಿದರು.

ಯುವಕರು ಅವಕಾಶ ವಂಚಿತರಾಗಿದ್ದಾರೆ. ನಿರುದ್ಯೋಗ ಹಾಗೂ ಬಡತನ ಹೆಚ್ಚಾಗಿದೆ. ಹತ್ತು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕೇಳುವುದೇ ಆಗಿದೆ. ಜನರು ಈ ಬಾರಿ ಕಾಂಗ್ರೆಸ್ ಪರವಾಗಿ ಲೋಕಸಭಾ ಚುನಾವಣೆಯಲ್ಲಿ 8-10 ಲಕ್ಷ ಮತ (2ನೇ ಪುಟಕ್ಕೆ)

## ಮಕ್ಕಳಿಂದ ಧಾರ್ಮಿಕ ಭಕ್ತಿ ಮಂತ್ರ ಪಠಣ




ರಾಣೇಬೆನ್ನೂರು, ಸೆ. 29- ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ವಂದೇ ಮಾತರಂ ಸಂಸ್ಥೆಯವರು ನಿರ್ಮಿಸಿರುವ ಅಯೋಧ್ಯೆ ರಾಮ ಮಂದಿರ ಮತ್ತು ರಾಣೇಬೆನ್ನೂರ್ ಕಾ ರಾಜಾ ಗಣಪತಿ ಪ್ರತಿಷ್ಠಾಪಿಸಿರುವ ಗಣೇಶೋತ್ಸವದ ಅಂಗವಾಗಿ ನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 'ಗಣಪತಿ ಅಥರ್ವಶೀರ್ಷ' ಭಕ್ತಿ ಸ್ತೋತ್ರ ಪಠಣಗಳನ್ನು ಭಕ್ತಿ, ಶ್ರದ್ಧೆಯಿಂದ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹತ್ತು ನಿಮಿಷಗಳ ಕಾಲ ಪಠಿಸುವುದರ ಮೂಲಕ ತಮ್ಮ ಭಕ್ತಿ ಪರಾಕಾಷ್ಠೆ ಮೆರೆದರು.

ಸ್ತೋತ್ರ ಪಠಣ ಮಾಡುವುದರ ಪ್ರಮುಖ ಉದ್ದೇಶವೇನೆಂದರೆ ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಿಸುವುದು ನಮ್ಮ ನಾಡಿನ ಸಂಸ್ಕೃತಿಯನ್ನು ಪರಿಚಯಿಸುವುದರ ಮೂಲಕ ಹಬ್ಬಗಳ ಆಚರಣೆ ಮತ್ತು ಅವುಗಳ ವಿಶೇಷತೆಯನ್ನು ತಿಳಿಸುವುದು.

ಕಾರ್ಯಕ್ರಮದಲ್ಲಿ ವಿದ್ಯಾವಾಹಿನಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಾಸುದೇವ ಸಾ ಲದ್ವಾ, ಪ್ರಧಾನ ಕಾರ್ಯದರ್ಶಿ ನಾಗೇಶ ಮುರುಡಣ್ಣವರ, ನಿರ್ದೇಶಕರುಗಳಾದ ತುಳಜಪ್ಪ ಲದ್ವಾ, ಮಲ್ಲಿಕಾರ್ಜುನ ಅಂಗಡಿ, ಶಾಲೆಯ ಪ್ರಾಚಾರ್ಯ ಎಸ್. ಪ್ರಕಾಶ ಮತ್ತು ಶಿಕ್ಷಕ ವೃಂದದವರು ಹಾಜರಿದ್ದರು.

# ದಿನಗೂಲಿ ನೌಕರರ, ಗುತ್ತಿಗೆದಾರರ ನಡುವೆ ಅ.3ಕ್ಕೆ ಒಪ್ಪಂದ

## ರೈತರಿಗೆ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಿ : ದಿನಗೂಲಿ ನೌಕರರಿಗೆ ಮುಖಂಡರ ಮನವಿ

ಮಲೇಬೆನ್ನೂರು, ಸೆ.29- 5 ತಿಂಗಳ ಬಾಕಿ ವೇತನ ಹಾಗೂ ಇಪಿಎಫ್, ಇಎಸ್‌ಐಗಳ ವಿಷಯ ಕುರಿತು ಇಲ್ಲಿನ ಭದ್ರಾ ನಾಲಾ ನಂ-3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಛೇರಿ ವ್ಯಾಪ್ತಿಯ ದಿನಗೂಲಿ ನೌಕರರ ಮತ್ತು ಇವರಿಗೆ ವೇತನ ನೀಡುವ ಗುತ್ತಿಗೆದಾರರ ನಡುವೆ ವ್ಯತ್ಯಾಸ ಆಗಿದ್ದರಿಂದ ದಿನಗೂಲಿ ನೌಕರರು ಗುರುವಾರದಿಂದ ಮತ್ತೆ ಪ್ರತಿಭಟನೆ ಆರಂಭಿಸಿದ್ದರು.

ಈ ಬಗ್ಗೆ ಶುಕ್ರವಾರ ಇಲ್ಲಿನ ನೀರಾವರಿ ಕಛೇರಿ ಆವರಣದಲ್ಲಿ ದಿನಗೂಲಿ ನೌಕರರು ಸ್ಥಳಕ್ಕೆ ಆಗಮಿಸಿದ್ದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಭದ್ರಾ ನೀರು ಬಳಕೆದಾರರ ಸಹಕಾರಿ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಮುಖಂಡರಾದ ಮುದೇಗೌಡ್ರ ತಿಪ್ಪೇಶ್, ಸುರೇಶ್ ಹಾದಿಮನಿ, ಜಿ. ಮಂಜುನಾಥ್ ಪಟೇಲ್, ನಂದಿತಾವರೆ ತಿಪ್ಪೇರುದ್ರಪ್ಪ, ಜಿಗಳಿ ಚಂದ್ರಪ್ಪ, ಮಲ್ಲನಾಯ್ಕನಹಳ್ಳಿ ಶೇಖರಪ್ಪ, ನಂದಿತಾವರೆ ಮುರುಗೇಂದ್ರಯ್ಯ ಮತ್ತಿತರರ ಸಮ್ಮುಖದಲ್ಲಿ ಗುತ್ತಿಗೆದಾರನ 10 ನಿಬಂಧನೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು.

ನಂತರ 4 ನಿಬಂಧನೆಗಳನ್ನು ಕೈ ಬಿಟ್ಟು 6 ನಿಬಂಧನೆಗಳಿಗೆ ದಿನಗೂಲಿ ನೌಕರರು ಸಮ್ಮತಿ ಸೂಚಿಸಿದರು.




ಈ ವಿಷಯವನ್ನು ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಅವರು ಗುತ್ತಿಗೆದಾರನಿಗೆ ಫೋನ್ ಮಾಡಿ ತಿಳಿಸಿದಾಗ ಆತ ಈ ಬಗ್ಗೆ ವಕೀಲರ ಜೊತೆ ಚರ್ಚಿಸಿ, ಅ. 3 ರ ಮಂಗಳವಾರ ಒಪ್ಪಂದ ಮಾಡಿಕೊಳ್ಳುತ್ತೇನೆಂಬ ಭರವಸೆ ನೀಡಿದಾಗ ದಿನಗೂಲಿ ನೌಕರರು ಕರ್ತವ್ಯಕ್ಕೆ ತೆರಳಲು ಒಪ್ಪಿದರು.

ಈ ವೇಳೆ ಮಾತನಾಡಿದ ದ್ಯಾವಪ್ಪ ರೆಡ್ಡಿ ಅವರು, ಅಚ್ಚುಕಟ್ಟಿನಲ್ಲಿ ಭತ್ತದ ನಾಟಿ ಮಾಡಿರುವ ಎಲ್ಲಾ ರೈತರಿಗೆ ನೀರು ತಲುಪಿಸಲು ಹಗಲಿರುಳು ಶ್ರಮ ವಹಿಸಿ ಕೆಲಸ ಮಾಡುವಂತೆ ದಿನಗೂಲಿ ನೌಕರರಲ್ಲಿ ಮನವಿ ಮಾಡಿದರು.

ನಂದಿಗಾವಿ ಶ್ರೀನಿವಾಸ್ ಮಾತನಾಡಿ, ನಿಮ್ಮ ಬಾಕಿ ವೇತನದ ಸಮಸ್ಯೆ ಅತಿ ಶೀಘ್ರದಲ್ಲಿ ಬಗೆಹರಿಯಲಿದೆ. ಆ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ನೀವು ಈ ಕ್ಷಣದಿಂದಲೇ ಕಾಲುವೆಗಳ ಮೇಲೆ ಸಂಚರಿಸಿ, ನೀರಿನ ನಿರ್ವಹಣೆ ಮಾಡಿ ಎಂದು ದಿನಗೂಲಿ ನೌಕರರಿಗೆ ಹೇಳಿದರು.

ಎಇಇಗಳಾದ ಧನಂಜಯ ನಾಯ್ಕ, ರಾಜಕುಮಾರ್, ದಿನಗೂಲಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಆಂಜನೇಯ, ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ, ಕೆ.ಪಿ. ಗಂಗಾಧರ್, ಪಿ.ಆರ್. ಕುಮಾರ್ ಸೇರಿದಂತೆ 150 ಕ್ಕೂ ಹೆಚ್ಚು ದಿನಗೂಲಿ ನೌಕರರು ಮತ್ತು ರೈತರು ಹಾಜರಿದ್ದರು.

**ರೊಟೇಷನ್ ಪದ್ಧತಿ ಜಾರಿಗೆ ಒತ್ತಾಯ :** ಮೇಲ್ಭಾಗದಲ್ಲಿ ನೀರಿನ ರೊಟೇಷನ್ ಪದ್ಧತಿ ಜಾರಿ ಮಾಡಿದರೆ ಮಾತ್ರ ಕೆ.ಎನ್. ಹಳ್ಳಿ, ಹೊಳೆ ಸಿರಿಗೆರೆ, ಕೊಕ್ಕನೂರು, ಕಮಲಾಪುರ, ಭಾನುವಳ್ಳಿ, ಯಲವಟ್ಟಿ, ಜಿಗಳಿ, ನಂದಿತಾವರೆ, ವಿನಾಯಕ ನಗರ ಕ್ಯಾಂಪ್ ಗ್ರಾಮಗಳ ಜಮೀನುಗಳಿಗೆ ಕಾಲುವೆಗಳಲ್ಲಿ ನೀರು ಬರಲಿದೆ. ಇಲ್ಲದಿದ್ದರೆ ನೀರಿನ ಸಮಸ್ಯೆ ಹೆಚ್ಚಾಗಲಿದೆ ಎಂದು ಹೊಳೆ ಸಿರಿಗೆರೆಯ ತಿಪ್ಪೇರುದ್ರಪ್ಪ, ಸಿ. ಪ್ರಭು, ಎನ್. ದೇವರಾಜ್, ಬಿ. ರಾಜು, ಕಮಲಾಪುರದ ಗಂಗಾಧರ್, ರಮೇಶ್, ಕೆ. ಎನ್. ಹಳ್ಳಿಯ ಅಶೋಕ್, ರಾಮಣ್ಣ ಮತ್ತಿತರರು ಈ ವೇಳೆ ಇಂಜಿನಿಯರ್ ಅವರನ್ನು ಒತ್ತಾಯಿಸಿದರು.

# ಪ್ರತಿ ದ್ರವ್ಯಗಳೂ ಗುರುತ್ವಾಕರ್ಷಣೆ ಸೆಳೆತಕ್ಕೆ

## 30 ವರ್ಷಗಳ ಪ್ರಯತ್ನದ ನಂತರ ವಿಜ್ಞಾನಿಗಳ ಅಧ್ಯಯನ ವರದಿ

ನವದೆಹಲಿ, ಸೆ. 29 - ಪ್ರತಿ ದ್ರವ್ಯ (ಆಂಟಿ ಮ್ಯಾಟರ್)ಗಳು ಕೆಳಮುಖವಾಗಿ ಬೀಳುತ್ತವೆ ಎಂದು ಇತ್ತೀಚಿನ ಅಧ್ಯಯನದಲ್ಲಿ ತಿಳಿಸಲಾಗಿದೆ. ಇದರಿಂದಾಗಿ ಪ್ರತಿ ದ್ರವ್ಯಗಳು ಮೇಲ್ಮುಖವಾಗಿ ಚಲಿಸುತ್ತವೋ ಅಥವಾ ಕೆಳಮುಖವಾಗಿ ಬೀಳುತ್ತವೋ? ಎಂಬ ಪ್ರಶ್ನೆಗೆ ಉತ್ತರ ದೊರೆತಂತಾಗಿದೆ.

ಮಹಾಸ್ಫೋಟದ ನಂತರ ಪ್ರಪಂಚ ಸೃಷ್ಟಿಯಾದ ಸಮಯದಲ್ಲಿ ದ್ರವ್ಯದ ಜೊತೆಗೆ ಪ್ರತಿದ್ರವ್ಯಗಳೂ ರೂಪುಗೊಂಡಿದ್ದವು. ಆದರೆ, ಪ್ರತಿದ್ರವ್ಯಗಳ ಬಗ್ಗೆ ಇಲ್ಲಿಯವರೆಗೂ ಹೆಚ್ಚು ಮಾಹಿತಿ ಪತ್ತೆ ಮಾಡಲು ಸಾಧ್ಯವಾಗಿಲ್ಲ.

ದ್ರವ್ಯಗಳು ಕಣಗಳಿಂದ ರೂಪುಗೊಂಡಿದ್ದರೆ, ಪ್ರತಿದ್ರವ್ಯಗಳು ಪ್ರತಿಕಣಗಳಿಂದ ರೂಪುಗೊಂಡಿರುತ್ತವೆ. ಇವುಗಳೆರಡೂ ಸಮಾನ ದ್ರವ್ಯರಾಶಿ ಹೊಂದಿರುತ್ತವೆ. ಇಷ್ಟಾದರೂ, ಪ್ರತಿದ್ರವ್ಯಗಳ ಸಾಕಷ್ಟು ಗುಣಲಕ್ಷಣಗಳು ಇನ್ನೂ ಪತ್ತೆಯಾಗಿಲ್ಲ.

ಆಂಟಿಹೈಡ್ರೋಜನ್ ಕಣಗಳು ಸಾಮಾನ್ಯ ಹೈಡ್ರೋಜನ್ ರೀತಿಯಲ್ಲಿ ಭೂಮಿಗೆ ಬೀಳುತ್ತವೆ ಎಂಬುದನ್ನು ಈಗ ಪತ್ತೆ ಮಾಡಿರುವುದು ಗಮನಾರ್ಹವಾಗಿದೆ. ಯುರೋಪಿಯನ್ ಆರ್ಗನೈಜೇಷನ್ ಫಾರ್ ನ್ಯೂಕ್ಲಿಯರ್ ರೀಸರ್ಚ್ (ಸಿ.ಇ.ಆರ್.ಎನ್.) ಸಂಸ್ಥೆಯಲ್ಲಿನ ಭೌತಶಾಸ್ತ್ರಜ್ಞರು ಎ.ಎಲ್.ಪಿ.ಹೆಚ್.ಎ. ಒಕ್ಕೂಟ ರೂಪಿಸಿಕೊಂಡು ಈ ಬಗ್ಗೆ ಸಂಶೋಧನೆ ನಡೆಸಿದ್ದರು.

ಪ್ರತಿದ್ರವ್ಯಗಳ ವರ್ತನೆಗಳು ಭೂಮಿಯ ಗುರುತ್ವಾಕರ್ಷಣೆ ನಿಯಮಗಳಿಗೆ ಅನುಗುಣವಾಗಿವೆ ಎಂಬುದು ಸಾಬೀತಾಗಿದೆ. ಈ ಕಣಗಳು ಪ್ರತಿಗುರುತ್ವದಿಂದ ವರ್ತಿಸಬಹುದು ಎಂಬ ವಾದವನ್ನು ಭೌತಶಾಸ್ತ್ರಜ್ಞರು ತಳ್ಳಿ ಹಾಕಿದ್ದಾರೆ. ಈ ಕುರಿತ ಅಧ್ಯಯನ 'ನೇಚರ್' ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

ಈ ಸಂಶೋಧನೆಯು ಪ್ರತಿದ್ರವ್ಯ ಅಧ್ಯಯನದಲ್ಲಿ ಮಹತ್ವದ ಮೈಲಿಗಲ್ಲು. ಪ್ರತಿದ್ರವ್ಯದ ಸ್ವರೂಪ ಅರಿಯುವಲ್ಲಿ ನಾವು ಇನ್ನಷ್ಟು ಹತ್ತಿರ ಬಂದಿದ್ದೇವೆ ಎಂದು ಭೌತಶಾಸ್ತ್ರಜ್ಞರು ತಿಳಿಸಿದ್ದಾರೆ. ಪ್ರತಿದ್ರವ್ಯದ ಗುಣಲಕ್ಷಣಗಳು ವಿಜ್ಞಾನದ ಅತಿ ದೊಡ್ಡ ನಿಗೂಢಗಳಲ್ಲಿ ಒಂದಾಗಿವೆ. ವಿಶ್ವದಲ್ಲಿದ್ದ ಪ್ರತಿದ್ರವ್ಯಗಳೆಲ್ಲ ಏನಾಗಿವೆ ಎಂಬುದು ವಿಜ್ಞಾನಿಗಳಿಗೆ ಇನ್ನೂ ಬಗೆಹರಿಸಲಾಗದ ಒಗಟಾಗಿದೆ.

ಜೂನ್ 2011ರಲ್ಲಿ ಸಿ.ಇ.ಆರ್.ಎನ್. ವಿಜ್ಞಾನಿಗಳು ಪ್ರತಿದ್ರವ್ಯಗಳನ್ನು 16 ನಿಮಿಷಗಳ ಕಾಲ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈ ಅವಧಿಯಲ್ಲಿ ಅವುಗಳ ಗುಣಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ದೊರೆತಿತ್ತು. ನಂತರದಲ್ಲಿ ಅಧ್ಯಯನಗಳನ್ನು ಪ್ರಕಟಿಸುತ್ತಾ ಬರಲಾಗಿದೆ.

2013ರಲ್ಲಿ ಎ.ಎಲ್.ಪಿ.ಹೆಚ್.ಎ. ತಂಡವು 100 ಆಂಟಿಹೈಡ್ರೋಜನ್ ಕಣಗಳನ್ನು ಹಿಡಿದಿಟ್ಟು ಪ್ರಯೋಗ ನಡೆಸಿದ್ದರು. ಈ ಕಣಗಳನ್ನು 20 ಸೆಕೆಂಡುಗಳ ಅಂತರದಲ್ಲಿ ಹಂತ ಹಂತವಾಗಿ ಬಿಡುಗಡೆ ಮಾಡಲಾಗಿತ್ತು.

ಹೈಡ್ರೋಜನ್ ಕಣಗಳಲ್ಲಿ ಒಂದು ಎಲೆಕ್ಟ್ರಾನ್ ಹಾಗೂ ಒಂದು ಪ್ರೋಟಾನ್ ಇರುತ್ತದೆ. ಆಂಟಿಹೈಡ್ರೋಜನ್‌ನಲ್ಲಿ ಒಂದು ಪಾಸಿಟ್ರಾನ್ (ಪಾಸಿಟಿವ್ ಗುಣ ಹೊಂದಿರುವ ಎಲೆಕ್ಟ್ರಾನ್) ಹಾಗೂ ಆಂಟಿಪ್ರೋಟಾನ್ (ನೆಗೆಟಿವ್ ಗುಣ ಹೊಂದಿರುವ ಪ್ರೋಟಾನ್) ಇರುತ್ತದೆ.

ಈ ಪ್ರತಿಕಣಗಳನ್ನು ರೂಪಿಸುವುದನ್ನು, ಹಿಡಿದಿಟ್ಟುಕೊಳ್ಳುವುದು ಹಾಗೂ ನಿಯಂತ್ರಿಸುವುದನ್ನು ಕಲಿಯಲು 30 ವರ್ಷಗಳು ಬೇಕಾದವು. ಆನಂತರವೇ ಅವುಗಳನ್ನು ಗುರುತ್ವಾಕರ್ಷಣೆ ಕ್ಷೇತ್ರದಲ್ಲಿ ನಿಯಂತ್ರಿತವಾಗಿ ಬಿಡಲು ಸಾಧ್ಯವಾಯಿತು ಎಂದು ಎ.ಎಲ್.ಪಿ. ಹೆಚ್.ಎ. ವಕ್ತಾರ ಜೆಫ್ರಿ ಹ್ಯಾಂಗಸ್ಟ್ ಹೇಳಿದ್ದಾರೆ.

ಪ್ರತಿದ್ರವ್ಯಗಳು ತ್ವರಿತವಾಗಿ ದ್ರವ್ಯಗಳ ಜೊತೆ ಬೆರೆಯುತ್ತವೆ. ದ್ರವ್ಯಗಳು ಎಲ್ಲೆಡೆ ಇರುತ್ತವೆ. ಹೀಗಾಗಿ ಪ್ರತಿದ್ರವ್ಯಗಳನ್ನು ಕಾಯ್ದಿಟ್ಟುಕೊಳ್ಳುವುದು ಕಠಿಣ ಕೆಲಸವಾಗಿದೆ.

ಪ್ರತಿದ್ರವ್ಯಗಳ ನಾಶ ತಡೆಗಾಗಿ ಅವುಗಳನ್ನು ಆಯಸ್ಕಾಂತ ಕ್ಷೇತ್ರದಲ್ಲಿ ಹಿಡಿದಿಡಲಾಗಿತ್ತು. ಈ ಕ್ಷೇತ್ರವನ್ನು ಸಾಧ್ಯವಾದಷ್ಟು ತಂಪಾಗಿರಿಸಲಾಗಿತ್ತು. ಈ ಹಂತದಲ್ಲಿ ಪ್ರತಿದ್ರವ್ಯಗಳ ವರ್ತನೆ ಅಧ್ಯಯನ ಮಾಡಲಾಗಿತ್ತು. ಪ್ರತಿದ್ರವ್ಯಗಳ ಚಲನೆಯ ಮೇಲೆ ಗುರುತ್ವಾಕರ್ಷಣೆ ಪ್ರಭಾವ ಅರಿಯಲು ನಡೆಸಲಾದ ಮೊದಲ ನೇರ ಪ್ರಯೋಗ ಇದಾಗಿದೆ ಎಂದು ಡೆನ್ಮಾರ್ಕ್‌ನ ಆರ್ಹಸ್ ವಿಶ್ವವಿದ್ಯಾಲಯದ ಭೌತಶಾಸ್ತ್ರಜ್ಞ ಹ್ಯಾಂಗಸ್ಟ್ ಹೇಳಿದ್ದಾರೆ.

ಐನ್‌ಸ್ಟೀನ್ ಅವರ ಸಾಪೇಕ್ಷ ಸಿದ್ಧಾಂತದಲ್ಲಿ ಗುರುತ್ವಾಕರ್ಷಣೆಯನ್ನು ವಿವರಿಸಲಾಗಿದೆ. ಆದರೆ, ಇದು ಪ್ರತಿದ್ರವ್ಯಗಳಿಗೂ ಅನ್ವಯವಾಗುತ್ತದೆಯೇ ಎಂಬುದು ಸಂಪೂರ್ಣ ಖಚಿತವಾಗಿರಲಿಲ್ಲ. ಈ ಪ್ರಯೋಗದಿಂದ ಸಾಪೇಕ್ಷ ಸಿದ್ಧಾಂತ ಮತ್ತೊಮ್ಮೆ ದೃಢಪಟ್ಟಿದೆ ಎಂದು ಎ.ಎಲ್.ಪಿ.ಹೆಚ್.ಎ. ಉಪ ವಕ್ತಾರ ವಿಲಿಯಂ ಬರ್ಶೆ ಹೇಳಿದ್ದಾರೆ.

ಮುಂದಿನ ಹಂತದಲ್ಲಿ ಪ್ರತಿದ್ರವ್ಯಗಳ ವೇಗೋತ್ಕರ್ಷವನ್ನು ನಿಖರವಾಗಿ ಅಧ್ಯಯನ ಮಾಡಲಾಗುವುದು. ದ್ರವ್ಯ ಹಾಗೂ ಪ್ರತಿದ್ರವ್ಯಗಳು ಸಮಾನ ವೇಗದಲ್ಲಿ ಬೀಳುತ್ತವೆಯೇ ಎಂಬ ಬಗ್ಗೆ ಪರಿಶೀಲಿಸಲಾಗುವುದು ಎಂದವರು ತಿಳಿಸಿದ್ದಾರೆ.

## ಯುರೋಪ್ ವಲಯದಲ್ಲಿ ಹಣದುಬ್ಬರ ಇಳಿಕೆ

ಫ್ರಾಂಕ್‌ಫರ್ಟ್, ಸೆ. 29 - ಸೆಪ್ಟೆಂಬರ್ ತಿಂಗಳಲ್ಲಿ ಯುರೋಪ್ ದೇಶಗಳಲ್ಲಿ ಹಣದುಬ್ಬರ ಇಳಿಕೆಯಾಗಿದೆ. ಆಹಾರ ವಸ್ತುಗಳ ಬೆಲೆಗಳು ಇಳಿಕೆಯಾಗಿವೆ. ಇದರಿಂದಾಗಿ ಕೇಂದ್ರ ಬ್ಯಾಂಕ್ ಬಡ್ಡಿ ದರ ನೀತಿ ಸಡಿಲಿಸುವ ಆಶಾಭಾವನೆ ಮೂಡಿದೆ. ಆಗಸ್ಟ್ ತಿಂಗಳಲ್ಲಿ ವಾರ್ಷಿಕ ಹಣದುಬ್ಬರ ಶೇ.5.2ರಷ್ಟಿತ್ತು. ಅದು ಸೆಪ್ಟೆಂಬರ್ ತಿಂಗಳಲ್ಲಿ ಶೇ.4.3ಕ್ಕೆ ಇಳಿಕೆಯಾಗಿದೆ. ಆದರೆ, ತೈಲ ಬೆಲೆಗಳು ಏರುಮುಖವಾಗಿರುವುದು ತೊಡಕಾಗಿದೆ. ಜರ್ಮನಿಯಲ್ಲಿ ಸಬ್ಸಿಡಿ ಸಾರಿಗೆಯ ಕಾರಣದಿಂದ ಹಣದುಬ್ಬರ ಇಳಿಕೆಯಾಗಿದೆ. ಇದು ಯುರೋಪ್ ಒಕ್ಕೂಟದಲ್ಲಿ ಹಣದುಬ್ಬರ ಇಳಿಕೆಯಾಗಲು ಪ್ರಮುಖ ಕಾರಣವಾಗಿದೆ. ಹೀಗಾಗಿ ಇನ್ನಷ್ಟು ಕಾಲ ಎಚ್ಚರಿಕೆ ಮುಂದುವರೆಸಬೇಕು ಎಂದು ಆರ್ಥಿಕ ಪರಿಣಿತರು ಎಚ್ಚರಿಸಿದ್ದಾರೆ.

# ಹರಿಹರದಲ್ಲಿಂದು ವಿಶ್ವ ಛಾಯಾಗ್ರಹಣ ದಿನಾಚರಣೆ

ಹರಿಹರ, ಸೆ. 29 - ನಗರದಲ್ಲಿ ಹರಿಹರ ತಾಲ್ಲೂಕು ಛಾಯಾಗ್ರಹಕರ ಸಂಘದ ವತಿಯಿಂದ ನಾಳೆ ದಿನಾಂಕ 30 ರ ಶನಿವಾರ ಬೆಳಗ್ಗೆ 12 ಗಂಟೆಗೆ ಎಸ್.ಎಸ್.ಕೆ. ಮಿನಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ವಿಶ್ವ ಛಾಯಾಗ್ರಹಣ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಸಂತೋಷ್ ಎನ್. ಖಿರೋಜಿ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮಾರಂಭವನ್ನು ಶಾಸಕ ಬಿ.ಪಿ. ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ತಹಶಿಲ್ದಾರ್ ಪೃಥ್ವಿ ಸಾನಿಕಂ, ಪಿಎಸ್‌ಐ ದೇವಾನಂದ್, ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ವಿಜಯ್ ಜಾಧವ್, ತಾಲ್ಲೂಕು ಛಾಯಾಗ್ರಾಹಕರ ಸಂಘದ ಗೌರವಾಧ್ಯಕ್ಷ ಅಂಬಾಸಾ ಮಹೇರ್ವಾಡೆ, ಗೌರವ ಸಲಹೆಗಾರ ಜಿ.ಪಿ. ಬಾಬು ಇತರರು ಅತಿಥಿಗಳಾಗಿ ಪಾಲ್ಗೊಳ್ಳುತ್ತಾರೆ.

ಸಮಾರಂಭದಲ್ಲಿ ಮೈಸೂರಿನ ಬಾಬು ಜಿ. ಎಸ್. ಇವರಿಂದ ಪೋಟೋ ಶಾಪ್ ಲೈಟ್ ರೂಂ ಬಗ್ಗೆ ವಿಶೇಷ ಕಾರ್ಯಾಗಾರ ಏರ್ಪಡಿಸಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ವಿಜಯ ಜಾಧವ್, ತಾಲ್ಲೂಕು ಛಾಯಾಗ್ರಾಹಕರ ಸಂಘದ ಗೌರವಾಧ್ಯಕ್ಷ ಅಂಬಾಸಾ ಮೆಹರ್ವಾಡೆ, ಜಿ.ಪಿ. ಬಾಬು, ಜಿಲ್ಲಾ ಕಾರ್ಯದರ್ಶಿ ಕೆ.ಸಿ. ರಾಜು, ಉಪಾಧ್ಯಕ್ಷ ಸತೀಶ್ ಆಚಾರ್, ಸಚ್ಚಿನ್ ಠಾಕೂರ್, ಪ್ರಧಾನ ಕಾರ್ಯದರ್ಶಿ ಮಧುಸೂದನ್ ಎಸ್. ಆರ್., ಸಹ ಕಾರ್ಯದರ್ಶಿ ಪ್ರಕಾಶ್, ಬಸವರಾಜ್ ತಳವಾರ್ ಮತ್ತಿತರರು ಉಪಸ್ಥಿತರಿದ್ದರು.

## ಟಾಪರ್‌ಗಳ ವೈಭವೀಕರಣ ಬೇಡ

(1ನೇ ಪುಟದಿಂದ) ತಿಳಿಸಲಾಗಿದೆ. ಹಾಸ್ಟೆಲ್ ಸೌಲಭ್ಯಗಳು ಹಾಗೂ ಬೋಧಕ ಸಿಬ್ಬಂದಿಗೆ ನೀತಿ ಸಂಹಿತೆ ರೂಪಿಸಲಾಗಿದೆ.

ಕೋಚಿಂಗ್ ಕೇಂದ್ರಗಳು ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಕೋಟಾ ಹಾಗೂ ಸಿಕರ್‌ಗಳಲ್ಲಿರುವ ಕೇಂದ್ರಗಳ ಮೇಲೆ ನಿಗಾ ವಹಿಸಲು ತಂಡವೊಂದನ್ನು ರಚಿಸಲಾಗುವುದು. ಕೇಂದ್ರಗಳಿಗೆ ಸೇರುವ ವಿದ್ಯಾರ್ಥಿಗಳು ಮೊದಲ 120 ದಿನಗಳಲ್ಲೇ ಹೊರ ಹೋಗಲು ಬಯಸಿದರೆ ಸುಲಭವಾಗಿ ರೀಫಂಡ್ ನೀಡುವ ವ್ಯವಸ್ಥೆ ಮಾಡಬೇಕು.

ವಿದ್ಯಾರ್ಥಿಗಳ ರ್‍ಯಾಂಕಿಂಗ್ ಆಧಾರದ ಮೇಲೆ ತರಗತಿಗಳ ವಿಂಗಡಣೆ ಮಾಡಬಾರದು. ಅವರ ಹೆಸರುಗಳನ್ನು ಆಧರಿಸಿ ತಂಡಗಳನ್ನು ರೂಪಿಸಬೇಕು. ವಾರದ ಸಾಧನೆಯ ಆಧಾರದ ಮೇಲೆ ಅವರ ತಂಡಗಳನ್ನು ವರ್ಷದ ಮಧ್ಯದಲ್ಲೇ ಬದಲಿಸಬಾರದು.

ಸಾಮಾನ್ಯ ಟೆಸ್ಟ್‌ಗಳ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಬಾರದು. ಅವರ ಫಲಿತಾಂಶವನ್ನು ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಿಳಿಸಬೇಕು. ಅಂಕ ಪಟ್ಟಿಯನ್ನು ಗೌಪ್ಯವಾಗಿರಿಸಬೇಕು. ಕೋಚಿಂಗ್ ಕೇಂದ್ರಗಳು ಟಾಪರ್‌ಗಳನ್ನು ವೈಭವೀಕರಿಸಬಾರದು ಎಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ರಕ್ಷಣೆಗಾಗಿ ನಿಮ್ಹಾನ್ಸ್ ಇಲ್ಲವೇ ಇತರೆ ಸರ್ಕಾರಿ ಕೇಂದ್ರಗಳಿಂದ ಮಾನಸಿಕ ಆರೋಗ್ಯ ಪರಿಣಿತರ ಸೇವೆ ಪಡೆಯಬೇಕು. ನಿಯಮಿತವಾಗಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯದ ಕೌನ್ಸೆಲಿಂಗ್ ಮಾಡಬೇಕು ಎಂದು ತಿಳಿಸಲಾಗಿದೆ. ನೀಟ್ ಹಾಗೂ ಜೆಇಇ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆಯಲು ಪ್ರತಿ ವರ್ಷ 2.5 ಲಕ್ಷ ವಿದ್ಯಾರ್ಥಿಗಳು ಕೋಟಾಗೆ ಬರುತ್ತಾರೆ. ಕೋಟಾದಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಕಳವಳಕ್ಕೆ ಕಾರಣವಾಗಿತ್ತು.

## ಪ್ರಯಾಣಿಕರ ಅಭಿಪ್ರಾಯದಂತೆ ವಂದೇ ಭಾರತ್ ರೈಲುಗಳಲ್ಲಿ ಬದಲಾವಣೆ

ಉದಯ್‌ಪುರ್, ಸೆ. 29 – ಈ ಹಿಂದಿನ ವಂದೇ ಭಾರತ್ ರೈಲುಗಳ ಪ್ರಯಾಣಿಕರು ನೀಡಿದ ಸಲಹೆಗಳನ್ನು ಆಧರಿಸಿ, ಭಾನುವಾರ ಚಾಲನೆ ನೀಡಲಾದ ಒಂಭತ್ತು ರೈಲುಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಸೀಟುಗಳ ಅಳವಡಿಕೆ, ವಾಷ್ ಬೇಸಿನ್ ಸೇರಿದಂತೆ ಹಲವು ವಿಷಯಗಳಲ್ಲಿ ಬದಲಾವಣೆ ಮಾಡಲಾಗಿದೆ. ಬೋಗಿಗಳ ಉತ್ಪಾದಕರು ಅತ್ಯಂತ ಸೂಕ್ಷ್ಮ ವಿಷಯಗಳ ಬಗ್ಗೆಯೂ ಗಮನ ಹರಿಸಿದ್ದಾರೆ. ಗಾಲಿ ಕುರ್ಚಿಗಳಲ್ಲಿ ಬರುವ ದಿವ್ಯಾಂಗರಿಗೆ ಅನುಕೂಲ ಕಲ್ಪಿಸಲಾಗಿದೆ. ಕಾಸರಗೋಡಿನಿಂದ ತಿರುವನಂತಪುರದ ನಡುವೆ ಸಂಚರಿಸುವ ವಂದೇ ಭಾರತ್ ರೈಲಿಗೆ ಮೊದಲ ಬಾರಿಗೆ ಕಿತ್ತಳೆ ಬಣ್ಣವನ್ನು ಬಳಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಮುಂದಿನ ಎರಡು ತಿಂಗಳಲ್ಲಿ ಇನ್ನೂ ಎರಡು ಕಿತ್ತಳೆ ಬಣ್ಣದ ರೈಲುಗಳು ಕಾರ್ಯಾರಂಭ ಮಾಡಲಿವೆ.

## ಅಭಿವೃದ್ಧಿ ದೇಶಗಳಿಂದ ಇಂಧನ ಅಡ್ಡಿ


ನವದೆಹಲಿ, ಸೆ. 29 - ಅಭಿವೃದ್ಧಿ ಹೊಂದಿದ ದೇಶಗಳು ತಾವು ಪಳೆ ಯುಳಿಕೆ ಇಂಧನ ಬಳಸುತ್ತಿದ್ದರೂ ಸಹ, ಪ್ಯಾರಿಸ್ ಒಪ್ಪಂದದ ಅಂಶಗಳನ್ನು ಮುಂದಿಟ್ಟುಕೊಂಡು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಳೆಯುಳಿಕೆ ಇಂಧನದ ಮೇಲೆ ಕಡಿವಾಣ ಹಾಕುವುದು ಅನುಚಿತ ಎಂದು ಭಾರತ ಹೇಳಿದೆ. ವಿಶ್ವ ಸಂಸ್ಥೆಯ ಪರಿಸರ ಬದಲಾವಣೆ ಕುರಿತ ಸಂಸ್ಥೆಯಾದ ಯು.ಎನ್.ಎಫ್.ಸಿ.ಸಿ.ಸಿ.ಯಲ್ಲಿ ಭಾರತ ತನ್ನ ನಿಲುವು ತಿಳಿಸಿದೆ. ಅಭಿವೃದ್ಧಿ ಹೊಂದಿದ ದೇಶಗಳು ಪ್ಯಾರಿಸ್ ಒಪ್ಪಂದದ 2.1 (ಸಿ) ಅಂಶ ಒಂದನ್ನೇ ಪ್ರತ್ಯೇಕವಾಗಿ ಪರಿಗಣಿಸಿ, ಉಳಿದ ಅಂಶಗಳನ್ನು ಕಡೆಗಣಿಸುತ್ತಿವೆ ಎಂದು ಭಾರತ ದೂರಿದೆ. ಪಳೆಯುಳಿಕೆ ಇಂಧನದ ಕುರಿತು ಈ ಒಂದೇ ಅಂಶಕ್ಕೆ ಅಭಿವೃದ್ಧಿ ಹೊಂದಿದ ದೇಶಗಳು ಒತ್ತು ನೀಡುತ್ತಿವೆ. ಆದರೆ, ಶುದ್ಧ ಇಂಧನಕ್ಕೆ ಹಣಕಾಸು ಒದಗಿಸುವತ್ತ ಗಮನ ಹರಿಸುತ್ತಿಲ್ಲ ಎಂದು ಆಕ್ಷೇಪಿಸಲಾಗಿದೆ.

## ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಸೆ.29- ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ಪರಿಶಿಷ್ಟ ವರ್ಗದ ಜನರ ಏಳಿಗೆಗಾಗಿ ಶ್ರಮಿಸಿದ ಅರ್ಹ ವ್ಯಕ್ತಿಗಳಿಂದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವ್ಯಕ್ತಿಗಳು ಸೆಪ್ಟೆಂಬರ್ 30 ರೊಳಗಾಗಿ ಅಗತ್ಯ ನಮೂನೆಯೊಂದಿಗೆ ಭರ್ತಿ ಮಾಡಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಕೊಠಡಿ ಸಂ. 45, ಜಿಲ್ಲಾಡಳಿತ ಭವನ, ಇಲ್ಲಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

### ಹೊನ್ನಪ್ಪರ ಶ್ರೀಮತಿ ಸುಶೀಲಮ್ಮ ನಿಧನ



ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ವಾಸಿ ದಿ. ಐ. ರುದ್ರಮುನಿಯಪ್ಪ ಇವರ ಧರ್ಮಪತ್ನಿ ಶ್ರೀಮತಿ ಸುಶೀಲಮ್ಮ (75) ಅವರು ದಿನಾಂಕ 29.9.2023ರಂದು ಶುಕ್ರವಾರ ಸಂಜೆ 7.15ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗು ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.9.2023ರ ಶನಿವಾರ ಬೆಳಿಗ್ಗೆ 11.30ಕ್ಕೆ ಅಸಗೋಡು ಗ್ರಾಮದಲ್ಲಿ ನೆರವೇರಲಿದೆ.

## ಶಾಂತಿಯುತ ಯಶಸ್ವಿ

(1ನೇ ಪುಟದಿಂದ) ಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡಲಾಗಿತ್ತು. ಈ ಭಾಗದ ಚಲನಚಿತ್ರ, ವಾಣಿಜ್ಯೋದ್ಯಮ, ಅಂಗಡಿ-ಮುಂಗಟ್ಟುಗಳು ಪೂರ್ಣವಾಗಿ ವಾಣಿಜ್ಯ ವಹಿವಾಟು ಸ್ಥಗಿತಗೊಂಡಿತ್ತು. ಕೈಗಾರಿಕೆಗಳು ಸ್ತಬ್ಧಗೊಂಡು ಕಾವೇರಿ ಹೋರಾಟಕ್ಕೆ ಬೆಂಬಲ ನೀಡಿದ್ದವು. ಆದರೆ, ರಾಜ್ಯ ಸರ್ಕಾರ ತಮ್ಮ ಸ್ವಾಮ್ಯಕ್ಕೆ ಒಳಪಟ್ಟ ಬಸ್‌ಗಳನ್ನು ರಸ್ತೆಗಿಳಿಸಿದ್ದರೂ ಪ್ರಯಾಣಿಕರಿಲ್ಲದೆ ಸೊರಗಿತ್ತು.

ಮುನ್ನೆಚ್ಚರಿಕೆಯಾಗಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಇನ್ನೂ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸಿದ್ದರೂ ಹಾಜರಾತಿ ವಿರಳವಾಗಿತ್ತು.

ಬಂದ್ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರಾಜಧಾನಿಯ ಹಾದಿ ಬೀದಿಯಲ್ಲಿ ಪ್ರತಿಭಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದ ಪೊಲೀಸರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾತ್ರ ನಡೆಯುವಂತೆ ನೋಡಿಕೊಂಡರು. ಚಿತ್ರೋದ್ಯಮ ಬಂದ್ ಮಾಡಿದ್ದ ನಟ-ನಟಿಯರು ಹಾಗೂ ಚಿತ್ರೋದ್ಯಮದ ಪ್ರಮುಖರು ಚಲನಚಿತ್ರ ವಾಣಿಜ್ಯ ಮಂಡಳಿ ಬಂದ್ ಮಾಡಿ ಪ್ರತಿಭಟನೆ ನಡೆಸಿ ಕಾವೇರಿ ನೀರು ಹರಿಸುವುದನ್ನು ನಿಲ್ಲಿಸುವಂತೆ ಆಗ್ರಹಿಸಿದರು.

ನಿಷೇಧಾಜ್ಞೆ ಜಾರಿ ಇದ್ದುದರಿಂದ ಯಾವುದೇ ಸಂಘಟನೆಗಳು ಮೆರವಣಿಗೆ ನಡೆಸಲಿಲ್ಲ. ಬಂದ್‌ನ ಕೇಂದ್ರ ಬಿಂದುವಾದ ವಾಟಾಳ್ ನಾಗರಾಜ್ ಬುರ್ಖಾ ತೊಟ್ಟು ವಿನೂತನವಾಗಿ ಪ್ರತಿಭಟನೆ ಮಾಡಿದರು.

ನಂತರ ಮಾತನಾಡಿದ ಅವರು, ಕರ್ನಾಟಕ ಬಂದ್ ಶಾಂತಿಯುತವಾಗಿ ಯಶಸ್ವಿಯಾಗಿದೆ. ಅಕ್ಟೋಬರ್ 5ರಂದು ರಾಜಧಾನಿಯಿಂದ ಕೆಆರ್‌ಎಸ್ ಜಲಾಶಯದವರೆಗೆ ಕೆಆರ್‌ಎಸ್ ಚಲೋ ರ್‍ಯಾಲಿ ನಡೆಸಲಾಗುವುದು ಎಂದರು.

# ಕೊಮಾರನಹಳ್ಳಿ ದೇವಸ್ಥಾನ ಕಾಣಿಕೆ ಹುಂಡಿಯಲ್ಲಿ 2,96,105 ರೂ. ಸಂಗ್ರಹ

## ಕುಂಬಳೂರು, ಹರಳಹಳ್ಳಿ ದೇವಸ್ಥಾನಗಳಲ್ಲೂ ಕಾಣಿಕೆ ಹಣ ಎಣಿಕೆ



ಮಲೇಬೆನ್ನೂರು, ಸೆ. 29- ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಶುಕ್ರವಾರ ತೆರೆದು ಕಾಣಿಕೆ ಹಣವನ್ನು ಎಣಿಕೆ ಮಾಡಲಾಯಿತು.

2,96,105 ರೂ. ಕಾಣಿಕೆ ಹಣ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕಿಂತ ಈ ವರ್ಷವೇ ಹೆಚ್ಚು ಕಾಣಿಕೆ ಬಂದಿದೆ. ಕಳೆದ ವರ್ಷ 2,74,725 ರೂ. ಕಾಣಿಕೆ ಸಂಗ್ರಹವಾಗಿತ್ತೆಂದು ದೇವಸ್ಥಾನದ ಆಡಳಿತಾಧಿಕಾರಿಗಳೂ ಆದ ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದರು.

ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಅಣ್ಣಪ್ಪ, ಆನಂದತೀರ್ಥ, ಸೌಮ್ಯ, ಮಂಜುಳಾ, ಗ್ರಾಮ ಸಹಾಯಕರಾದ ಚನ್ನಪ್ಪ, ರಾಜು, ನಾಗರಾಜ್, ಸುನೀಲ್, ರಾಮಣ್ಣ, ರಾಜಣ್ಣ, ಚಂದ್ರಮ್ಮ, ಗ್ರಾಮದ ಮುಖಂಡರಾದ ಜಿ. ಮಂಜುನಾಥ್ ಪಟೇಲ್, ಅರಕೆರೆ ನಾಗರಾಜ್, ಎಂ.ಎಸ್. ರಂಗನಾಥ್, ಮಲೇಬೆನ್ನೂರಿನ ಕೆ.ಜಿ. ರಂಗನಾಥ್, ದೇವಸ್ಥಾನದ ಪ್ರಧಾನ ಅರ್ಚಕ ಕೆ. ಮಂಜುನಾಥಚಾರ್, ಗುರುನಾಥಚಾರ್ ಮತ್ತಿತರರು ಕಾಣಿಕೆ ಎಣಿಕೆಯಲ್ಲಿ ಭಾಗವಹಿಸಿದ್ದರು.

ಇದೇ ದಿನ ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ದೇವಸ್ಥಾನದ ಕಾಣಿಕೆ ಹುಂಡಿಯನ್ನು ತೆರೆದು ಎಣಿಕೆ ಮಾಡಿದಾಗ 73,370 ರೂ. ಕಾಣಿಕೆ ಹಣ ಸಂಗ್ರಹವಾಗಿದೆ.

ಕಳೆದ ವರ್ಷದ 40,250 ರೂ. ಸಂಗ್ರಹವಾಗಿತ್ತು. ಹರಳಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಾಣಿಕೆ ಹುಂಡಿಯಲ್ಲಿ 67,215 ರೂ. ಕಾಣಿಕೆ ಇತ್ತು. ಕಳೆದ ವರ್ಷ 1,56,560 ರೂ. ಕಾಣಿಕೆ ಸಂಗ್ರಹವಾಗಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ.

## 1.5 ಲಕ್ಷ ಮತಗಳ ಗೆಲುವಿನ ವಿಶ್ವಾಸ

(1ನೇ ಪುಟದಿಂದ) ಚಲಾವಣೆಯಾಗಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಮುಂಬರುವ ದಿನಗಳಲ್ಲಿ ವಾರಕ್ಕೆ ಎರಡು ದಿನ ಕುಗ್ರಾಮಗಳಲ್ಲಿ ವಾಸ ಮಾಡಿ ಅಲ್ಲಿನ ಜನರ ಕಷ್ಟಗಳನ್ನು ತಿಳಿಯುತ್ತೇನೆ. ಅವರ ಸಮಸ್ಯೆ ನಿವಾರಣೆಗೆ ರಾಜಕೀಯ ಹಾಗೂ ಸಾಮಾಜಿಕವಾಗಿ ಸ್ಪಂದಿಸುತ್ತೇನೆ. ಅಕ್ಟೋಬರ್ 8ರಂದು ಹರಿಹರದ ಕೊಪ್ಪದಲ್ಲಿ ಮೊದಲ ಗ್ರಾಮ ವಾಸ್ತವ್ಯ ನಡೆಯಲಿದೆ ಎಂದು ವಿನಯ್‌ಕುಮಾರ್ ಹೇಳಿದರು.

### ಅ.2ರಂದು ವಿಕಲಚೇತನರಿಗೆ ಸಲಕರಣೆಗಳ ವಿತರಣೆ

ಬರುವ ಅಕ್ಟೋಬರ್ 2ರಂದು ನಗರದ ರೇಣುಕ ಮಂದಿರದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜನ್ಮ ದಿನಾಚರಣೆ ಹಾಗೂ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ವಿಕಲಚೇತನರಿಗೆ ಗಾಲಿ ಕುರ್ಚಿ, ವಾಕರ್ ಹಾಗೂ ಶ್ರವಣ ಸಾಧನಗಳನ್ನು ವಿತರಿಸಲಾಗುವುದು ಎಂದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್ ತಿಳಿಸಿದ್ದಾರೆ.

ವಿನಯಕುಮಾರ್ ಜಿ.ಬಿ. ಅಭಿಮಾನಿ ಬಳಗದ ವತಿಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ.

ಉದ್ಘಾಟನೆಯನ್ನು ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಂದಿಗುಡಿ ವೃಷಭಪುರಿ ಸಂಸ್ಥಾನಮಠದ ಜಗದ್ಗುರು ಶ್ರೀ ಸಿದ್ದರಾಮ ಶಿವಾಚಾರ್ಯ ಸ್ವಾಮೀಜಿ, ಕನಕ ಗುರು ಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚೆನ್ನಯ್ಯ ಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಹಾವೇರಿಯ ಅಂಬಿಗರ ಚೌಡಯ್ಯ ಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಚಿತ್ರದುರ್ಗದ ಮಡಿವಾಳ ಗುರುಪೀಠದ ಶ್ರೀ ಬಸವ ಮಡಿವಾಳ ಮಾಚಿದೇವ ಸ್ವಾಮೀಜಿ ಹಾಗೂ ಚಿತ್ರದುರ್ಗ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ದಾವಣಗೆರೆಯ ಮೌಲ್ವಿ ಶಾಹೀದ್ ರಜಾ ಉಪಸ್ಥಿತರಿರಲಿದ್ದಾರೆ.

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಹಳ್ಳೂರಿನಲ್ಲಿ ಇಂದು ಕೃತಿಗಳ ಲೋಕಾರ್ಪಣೆ

ದಾವಣಗೆರೆ, ಸೆ. 29- ಶ್ರೀ ಲಕ್ಷ್ಮೀರಂಗನಾಥ ದೇವಾಲಯ ಟ್ರಸ್ಟ್ ಕಮಿಟಿ ಹಳ್ಳೂರು, ಶಾಲಾ ಶಿಕ್ಷಣ ಇಲಾಖೆ ಹೊನ್ನಾಳಿ, ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ಕರ್ನಾಟಕ ರಾಜ್ಯ ವಿವಿ ಮತ್ತು ಪದವಿ ಕಾಲೇಜುಗಳ ನಿವೃತ್ತ ಪ್ರಾಧ್ಯಾಪಕರ ಸಂಘ, ಕಡೆಮನೆ ಪ್ರಕಾಶನ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 30 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ರಟ್ಟಿಹಳ್ಳಿ ತಾಲ್ಲೂಕು ಹಳ್ಳೂರಿನ ಹಳ್ಳೂರು ಶ್ರೀ ಲಕ್ಷ್ಮೀರಂಗನಾಥ ದೇವಾಲಯದ ಆವರಣದಲ್ಲಿ ಕೃತಿಗಳ ಲೋಕಾರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಜಿ. ಕೃಷ್ಣಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಳ್ಳೂರು ಶ್ರೀ ಲಕ್ಷ್ಮೀ ರಂಗನಾಥ ಟ್ರಸ್ಟ್ ಅಧ್ಯಕ್ಷ ಬಸವರಾಜಪ್ಪ ಮಹದೇವಪ್ಪ ಮೆಣಶಿನಕಾಯಿ ಅಧ್ಯಕ್ಷತೆ ವಹಿಸುವರು. ಹಿರೇಕೆರೂರು ಶಾಸಕ ಯು.ಬಿ. ಬಣಕಾರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

'ತುಂಗಭದ್ರಾ ಕಣಿವೆಯ ಹಳ್ಳೂರು ಚರಿತ್ರೆಯಲ್ಲಿ ಶ್ರೀ ಲಕ್ಷ್ಮೀರಂಗನಾಥ ದೇವಾಲಯ' ಕುರಿತ ಪುಸ್ತಕವನ್ನು ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ ಹಾಗೂ 'ಮರೆತು ಹೋದ ಹಳ್ಳೂರು ದಕ್ಷಿಣ ಭಾರತದ ದುರಂತ ಇತಿಹಾಸಕ್ಕೆ ಸಾಕ್ಷಿಯೇ?' ಕುರಿತ ಪುಸ್ತಕವನ್ನು ಶಾಸಕ ಡಿ.ಜಿ. ಶಾಂತನಗೌಡ ಲೋಕಾರ್ಪಣೆಗೊಳಿಸಲಿದ್ದಾರೆ.

ಐತಿಹಾಸಿಕ ಪರಂಪರೆ ಕುರಿತು ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷ ಡಾ. ದೇವರ ಕೊಂಡಾರೆಡ್ಡಿ ಮಾತನಾಡುವರು. ಎರಡು ಪುಸ್ತಕಗಳ ಕುರಿತು ಮೈಸೂರಿನ ವಿಶ್ರಾಂತ ಪ್ರಾಚಾರ್ಯ ಪ್ರೊ.ಎಸ್.ಶಿವಾಜಿ ಜೋಯಿಸ್, ತುಮಕೂರು ವಿಶ್ರಾಂತ ಪ್ರಾಚಾರ್ಯ ಪ್ರೊ.ಎಂ.ಹೆಚ್. ನಾಗರಾಜ್ ಮಾತನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನರಸಗೊಂಡನಹಳ್ಳಿ ಸಮಾಜ ಸೇವಕ ಡಾ.ಎನ್.ಹೆಚ್. ಹಾಲಪ್ಪ, ಹೊನ್ನಾಳಿ ವೈದ್ಯರಾದ ಡಾ. ರಾಜಕುಮಾರ್, ಹೊನ್ನಾಳಿ ಬಿಇಓ ಎಸ್.ಸಿ. ನಾಗೇಂದ್ರಪ್ಪ, ಭದ್ರಾವತಿ ಬಿಇಓ ಎ.ಕೆ. ನಾಗೇಂದ್ರಪ್ಪ, ಹೊನ್ನಾಳಿ ಇತಿಹಾಸ ತಜ್ಞ ಡಾ. ನಾ. ಕೊಟ್ರೇಶ್ ಉತ್ತಂಗಿ, ತುಮಕೂರು ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಸಿಇಓ ಪ್ರೊ.ಕೆ. ಚಂದ್ರಣ್ಣ, ಸಿರಾ ಇತಿಹಾಸ ಸಂಶೋಧಕ ಡಾ.ಎನ್. ನಂದೀಶ್ವರ, ಸ್ಕ್ಯಾನ್ ಪ್ರಿಂಟರ್ಸ್ ಕೃಷ್ಣಮೂರ್ತಿ ಮತ್ತಿತರರು ಭಾಗವಹಿಸಲಿದ್ದಾರೆ.

# ಪಾಕಿಸ್ತಾನ : ಎರಡು ದಾಳಿಗಳಲ್ಲಿ 56 ಸಾವು

ಕರಾಚಿ, ಸೆ. 29 - ಪಾಕಿಸ್ತಾನದ ಪ್ರಕ್ಷುಬ್ಧಿತ ಬಲೂಚಿಸ್ತಾನ್ ಪ್ರಾಂತ್ಯದ ಮಸೀದಿಯೊಂದರ ಬಳಿ ನಡೆಸಲಾದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 52 ಜನ ಸಾವನ್ನಪ್ಪಿದ್ದಾರೆ ಹಾಗೂ 50ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಮಸ್ತುಂಗ್ ಜಿಲ್ಲೆಯ ಅಲ್ ಫಲಾ ರಸ್ತೆಯಲ್ಲಿರುವ ಮದೀನಾ ಮಸೀದಿಯ ಬಳಿ ಸ್ಫೋಟ ನಡೆಸಲಾಗಿದೆ. ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಸೇರಿದಾಗ ಆತ್ಮಹತ್ಯಾ ದಾಳಿ ನಡೆಸಲಾಗಿದೆ. ಮಸ್ತುಂಗ್ ಈ ಹಿಂದಿನಿಂದಲೂ ಉಗ್ರವಾದ ಪೀಡಿತ ಪ್ರದೇಶವಾಗಿದೆ. 2018ರಲ್ಲಿ ಇದೇ ಜಿಲ್ಲೆಯಲ್ಲಿ ನಡೆಸಲಾದ ಉಗ್ರವಾದಿ ದಾಳಿಯಲ್ಲಿ ಕನಿಷ್ಠ 128 ಜನ ಸಾವನ್ನಪ್ಪಿದ್ದರು. ಮಸ್ತುಂಗ್ ದಾಳಿ ನಡೆದ ಕೆಲವೇ ಗಂಟೆಗಳ ನಂತರ ಖೈಬರ್ ಪಖ್ತುಂಖ್ವದ ಹಂಗು ನಗರದ ಮಸೀದಿಯಲ್ಲಿ ಮತ್ತೊಂದು ಸ್ಫೋಟ ನಡೆದಿದೆ. ಈ ಸ್ಫೋಟದಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ.

# ಕಾವೇರಿ ಬಂದ್‌ಗೆ ಹರಿಹರದಲ್ಲಿ ಉತ್ತಮ ಪ್ರತಿಕ್ರಿಯೆ





ಹರಿಹರ, ಸೆ. 29 – ಕಾವೇರಿ ನೀರನ್ನು ತಮಿಳುನಾಡಿಗೆ ಬಿಡದಂತೆ ಆಗ್ರಹಿಸಿ ಕರೆ ನೀಡಲಾಗಿದ್ದ ಬಂದ್‌ಗೆ ನಗರದಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ. ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಸ್ವಯಂಪ್ರೇರಿತವಾಗಿ ಬಂದ್ ಮಾಡಿ ಬೆಂಬಲವನ್ನು ನೀಡಿದರು.

ಬ್ಯಾಂಕ್ ಸರ್ಕಾರಿ ಕಚೇರಿ, ಶಾಲಾ ಕಾಲೇಜು, ಆಟೋ, ಬಸ್ ಸಂಚಾರ ಆಸ್ಪತ್ರೆ, ಔಷಧಿ ಅಂಗಡಿ, ಹೂವಿನ ಅಂಗಡಿ ಎಂದಿನಂತೆ ಕಾರ್ಯ ನಿರ್ವಹಿಸಿದವು.

ಹೋಟೆಲ್, ಬೇಕರಿ, ಹಾರ್ಡ್‌ವೇರ್, ತರಕಾರಿ, ದಿನಸಿ ಪದಾರ್ಥ, ಬಾರ್, ಸ್ಟೇಷನರಿ, ಬಂಗಾರ, ಬಟ್ಟೆ ಗ್ಯಾರೇಜ್, ಆಟೋಮೊಬೈಲ್ ಸೇರಿದಂತೆ ಹಲವು ಅಂಗಡಿಗಳು ತಮ್ಮ ವ್ಯಾಪಾರ ವಹಿವಾಟು ನಡೆಸದೇ ಬಂದ್‌ಗೆ ಬೆಂಬಲ ನೀಡಿದವು. ಬಸ್ ಸಂಚಾರ ಇದ್ದರೂ ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆ ಇತ್ತು.

ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಜಯ ಕರ್ನಾಟಕ ಸಂಘಟನೆ, ಕನ್ನಡ ಸಾಹಿತ್ಯ ಪರಿಷತ್ತು, ವಕೀಲರ ಸಂಘ, ಡಿ.ಎಸ್.ಎಸ್. ಸಂಘಟನೆ (ಮಹಾತ್ಮ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಆಮ್ ಆದ್ಮಿ ಪಕ್ಷ, ವಕೀಲರ ಸಂಘ, ಆಟೋ ಚಾಲಕರು ಮತ್ತು ಮಾಲೀಕರ ಸಂಘ, ಕರವೇ (ಹೆಚ್. ಶಿವರಾಮೇಗೌಡ ಬಣ) ಹರಿಹರ ವರ್ತಕರ ಸಂಘ, ಹರಿಹರ ಹೋಟೆಲ್ ಮತ್ತು ಬೇಕರಿ ಮಾಲೀಕರ ಸಂಘ, ವಿಷ್ಣು ಸೇನಾ ಸಮಿತಿ, ಎಗ್ ರೈಸ್ ವ್ಯಾಪಾರಿಗಳ ಸಂಘ, ಹೂವಿನ ವ್ಯಾಪಾರಿಗಳ ಸಂಘ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ) ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ಬಂದ್‌ನಲ್ಲಿ ಭಾಗವಹಿಸಿದ್ದರು.

ಸಂಘಟನೆಗಳಿಂದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ಪಕ್ಕೀರಸ್ವಾಮಿ ಮಠದ ಮುಂಭಾಗದಿಂದ ಪ್ರಾರಂಭಗೊಂಡು ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆ ಮೂಲಕ ಸಂಚರಿಸಿ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಪೃಥ್ವಿ ಸಾನಿಕಂ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ದೂಡಾ ಮಾಜಿ ಸದಸ್ಯ ಹೆಚ್. ನಿಜಗುಣ, ರಮೇಶ್ ಮಾನೆ, ಪ್ರೀತಂ ಬಾಬು, ಶ್ರೀನಿವಾಸ್, ಎಂ. ಚಿದಾನಂದ ಕಂಚಿಕೇರಿ, ಗೋವಿಂದ ಕೊಪ್ಪಳ ಮಂಜುನಾಥ್ ಮಾತನಾಡಿ, ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಎಂ. ಚಿದಾನಂದ ಕಂಚಿಕೇರಿ, ಕನ್ನಡ ರಕ್ಷಣಾ ವೇದಿಕೆಯ ರಮೇಶ್ ಮಾನೆ, ಪ್ರೀತಂ ಬಾಬು, ಎಂ. ಇಲಿಯಾಜ್ ಆಹ್ಮದ್, ಜಯ ಕರ್ನಾಟಕ ಸಂಘಟನೆಯ ಎಸ್. ಗೋವಿಂದ, ಮಂಜುನಾಥ್, ವಕೀಲರ ಸಂಘದ ಅಧ್ಯಕ್ಷ ರುದ್ರಗೌಡ್ರು, ವಕೀಲರಾದ ಸಾಕಮ್ಮ, ಗಣೇಶ ಕೆ. ದುರ್ಗದ, ನಾಗರಾಜ್ ಎಂ. ಅಬ್ದುಲ್ ರೆಹಮಾನ್, ಮಾರುತಿ ಬೇಡರ್, ರಮೇಶ್, ಶಂಭುಲಿಂಗ ಪಾಟೀಲ್, ಹೆಚ್. ಭಾಗೀರಥಿ, ಡಿ.ಎಸ್.ಎಸ್. ಎ.ಕೆ. ಶ್ರೀನಿವಾಸ್, ಮಂಜುನಾಥ್ ಕೊಪ್ಪಳ, ಕೊಟ್ರೇಶ್, ಯಮನೂರು, ಸಿದ್ದಲಿಂಗಸ್ವಾಮಿ, ಪ್ರಭಾಕರ್, ರಘು, ದುರುಗೇಶ್, ಶಶಿನಾಯ್ಕ್, ವಿನಾಯಕ, ಆನಂದ್ ಎಂ.ಆರ್.ಶಬರೀಶ್, ಸುನೀಲ್, ವಿಜಯ್, ಶ್ರೀನಿವಾಸ್, ಶಂಕರ್ ದುರಗೋಜಿ, ಆಲಿ ಅಕ್ಬರ್, ರಾಮು ಸಂತೋಷ, ತಿಪ್ಪೇಶ್, ವಿನಯ್, ಗಿರೀಶ್, ಪ್ರಕಾಶ್, ಮಹದೇವಮ್ಮ, ಉಮೇಶ್ ಹುಲ್ಲಮನಿ, ಅರುಣ್ ಕುಮಾರ್ ಆಮ್ ಆದ್ಮಿ ಪಕ್ಷ ರಾಘವೇಂದ್ರ, ಬಸವರಾಜ್ ಹಲಸಬಾಳು, ಕನ್ನಡ ಸಮರಸೇನೆ ಭಾಗ್ಯಮ್ಮ ಇತರರು ಹಾಜರಿದ್ದರು.

# ರೈಲುಗಳ ರದ್ದು, ರೈಲುಗಳ ಮಾರ್ಗ ಬದಲಾವಣೆ

**ರದ್ದು** : ಗುಂಟೂರು ವಿಭಾಗದಲ್ಲಿ ರೈಲ್ವೆ ಸುರಕ್ಷತೆಗೆ ಸಂಬಂಧಿಸಿದ ನಿರ್ವಹಣಾ ಕಾಮಗಾರಿ ಸಲುವಾಗಿ ಈ ಕೆಳಗಿನ ರೈಲುಗಳನ್ನು ರದ್ದುಗೊಳಿಸಲು ದಕ್ಷಿಣ ಮಧ್ಯ ರೈಲ್ವೆ ವಲಯವು ಸೂಚಿಸಿದೆ.

ರೈಲು ಸಂಖ್ಯೆ 17329 ಎಸ್.ಎಸ್.ಎಸ್ ಹುಬ್ಬಳ್ಳಿ - ವಿಜಯವಾಡ ಡೈಲಿ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 2 ರಿಂದ ಅಕ್ಟೋಬರ್ 8 ರವರೆಗೆ ಮತ್ತೆ ರದ್ದುಗೊಳಿಸಲಾಗುತ್ತಿದೆ.

ರೈಲು ಸಂಖ್ಯೆ 17330 ವಿಜಯವಾಡ - ಎಸ್.ಎಸ್.ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 3 ರಿಂದ ಅಕ್ಟೋಬರ್ 9 ರವರೆಗೆ ಮತ್ತೆ ರದ್ದುಗೊಳಿಸಲಾಗುತ್ತಿದೆ.

**ಮಾರ್ಗ ಬದಲಾವಣೆ** : ವಿಜಯವಾಡ ವಿಭಾಗದಲ್ಲಿ ರೈಲ್ವೆ ಸುರಕ್ಷತೆಗೆ ಸಂಬಂಧಿಸಿದ ನಿರ್ವಹಣಾ ಕಾಮಗಾರಿ ಸಲುವಾಗಿ ಈ ಕೆಳಗಿನ ರೈಲುಗಳ ಮಾರ್ಗ ಬದಲಾವಣೆ ಮಾಡಲಾಗುತ್ತಿದೆ ಎಂದು ದಕ್ಷಿಣ ಮಧ್ಯ ರೈಲ್ವೆ ವಲಯವು ಸೂಚಿಸಿದೆ.

ಅಕ್ಟೋಬರ್ 1, 3 ಮತ್ತು 8 ರಂದು ಹಟಿಯಾದಿಂದ ಹೊರಡುವ ರೈಲು ಸಂಖ್ಯೆ 12835 ಹಟಿಯಾ - ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ನಿಡದವೊಲು, ಭೀಮಾವರಂ ಟೌನ್, ಗುಡಿವಾಡ ಮತ್ತು ವಿಜಯವಾಡ ನಿಲ್ದಾಣಗಳ ಬದಲಾದ ಮಾರ್ಗದ ಮೂಲಕ ಸಂಚರಿಸಲಿದೆ.

ಅಕ್ಟೋಬರ್ 6 ರಂದು ಟಾಟಾನಗರದಿಂದ ಹೊರಡುವ ರೈಲು ಸಂಖ್ಯೆ 12889 ಟಾಟಾನಗರ-



ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಸಾಪ್ತಾಹಿಕ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ನಿಡದಾವೊಲು, ಭೀಮಾವರಂ ಟೌನ್, ಗುಡಿವಾಡ ಮತ್ತು ವಿಜಯವಾಡ ನಿಲ್ದಾಣಗಳ ಬದಲಾದ ಮಾರ್ಗದ ಮೂಲಕ ಸಂಚರಿಸಲಿದೆ.

ಅಕ್ಟೋಬರ್ 5 ರಂದು ಟಾಟಾನಗರದಿಂದ ಹೊರಡುವ ರೈಲು ಸಂಖ್ಯೆ 18111 ಟಾಟಾನಗರ-ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ನಿಡದವೊಲು, ಭೀಮಾವರಂ ಟೌನ್, ಗುಡಿವಾಡ ಮತ್ತು ವಿಜಯವಾಡ ನಿಲ್ದಾಣಗಳ ಬದಲಾದ ಮಾರ್ಗದ ಮೂಲಕ ಸಂಚರಿಸಲಿದೆ.

**ಮಾರ್ಗ ಬದಲಾವಣೆ** : ಚಕ್ರದರಪುರ ವಿಭಾಗದ ರೂರ್ಕೆಲಾದಲ್ಲಿ ರೈಲ್ವೆ ಸುರಕ್ಷತೆಗೆ ಸಂಬಂಧಿಸಿದ ನಿರ್ವಹಣಾ ಕಾಮಗಾರಿ ಸಲುವಾಗಿ ಈ ಕೆಳಗಿನ ರೈಲುಗಳನ್ನು ರದ್ದು ಮತ್ತು ಮಾರ್ಗ ಬದಲಾವಣೆ ಮಾಡಲು ಆಗ್ನೇಯ ರೈಲ್ವೆ ವಲಯವು ಸೂಚಿಸಿದೆ.

**ರದ್ದು** : ರೈಲು ಸಂಖ್ಯೆ 12835 ಹಟಿಯಾ-ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಬೆಂಗಳೂರು ದ್ವಿ-ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 1 ಮತ್ತು 10 ರಂದು ರದ್ದುಪಡಿಸಲಾಗುತ್ತಿದೆ.

ರೈಲು ಸಂಖ್ಯೆ 12836 ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು-ಹಟಿಯಾ ದ್ವಿ-ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 3, 10 ಮತ್ತು 12 ರಂದು ರದ್ದುಪಡಿಸಲಾಗುತ್ತಿದೆ.

ರೈಲು ಸಂಖ್ಯೆ 17321 ವಾಸ್ಕೋ-ಡ-ಗಾಮಾ-ಜಸಿದಿಹ್ ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 13 ರಂದು ರದ್ದುಗೊಳಿಸಲಾಗುತ್ತಿದೆ.

ರೈಲು ಸಂಖ್ಯೆ 17322 ಜಸಿದಿಹ್-ವಾಸ್ಕೋ-ಡ-ಗಾಮಾ ಸಾಪ್ತಾಹಿಕ ಸೂಪರ್ಫಾಸ್ಟ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲನ್ನು ಅಕ್ಟೋಬರ್ 16 ರಂದು ರದ್ದುಗೊಳಿಸಲಾಗುತ್ತಿದೆ

**ಮಾರ್ಗ ಬದಲಾವಣೆ:** ಅಕ್ಟೋಬರ್ 13 ರಂದು ಟಾಟಾನಗರದಿಂದ ಪ್ರಾರಂಭವಾಗುವ ರೈಲು ಸಂಖ್ಯೆ 12889 ಟಾಟಾನಗರ - ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ರಾಜ್‌ಖರ್ಸಾವನ್, ಡಂಗೋಪೊಸಿ, ಜರೋಲಿ, ನಯಾಗರ್, ಜಖಾಪುರ ಮತ್ತು ಕಟಕ್ ನಿಲ್ದಾಣಗಳ ಬದಲಾದ ಮಾರ್ಗದ ಮೂಲಕ ಸಂಚರಿಸಲಿದೆ ಎಂದು ಹುಬ್ಬಳ್ಳಿ ನೈಋತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## 314 ರೈಲುಗಳ ವೇಳಾಪಟ್ಟಿ ಪರಿಷ್ಕರಣೆ

314 ರೈಲುಗಳ ಸಮಯವನ್ನು ಅಕ್ಟೋಬರ್ 1 ರಿಂದ ಜಾರಿಗೆ ಬರುವಂತೆ ನೈರುತ್ಯ ರೈಲ್ವೆ ವಲಯದ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ವಿವಿಧ ನಿಲ್ದಾಣಗಳಲ್ಲಿನ ರೈಲುಗಳ ಆಗಮನ ಮತ್ತು ನಿರ್ಗಮನದ ನೂತನ ವೇಳಾಪಟ್ಟಿಯನ್ನು ಕ್ರಮ ಸಂಖ್ಯೆ I ರಲ್ಲಿ ಪರಿಷ್ಕರಿಸಲು ನೈರುತ್ಯ ರೈಲ್ವೆಯು ನಿರ್ಧರಿಸಿದೆ. ಹೊಸ ರೈಲುಗಳ ಪರಿಚಯ, ರೈಲು ಬೋಗಿಗಳ ಹೆಚ್ಚಳ, ರೈಲುಗಳ ವಿಸ್ತರಣೆ, ನೂತನ ನಿಲುಗಡೆ, ಬೋಗಿಗಳ ಶಾಶ್ವತ ಹೆಚ್ಚಳ ಸೇರಿದಂತೆ ಇನ್ನಿತರೆ ಮಾಹಿತಿಗಳ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ ಕ್ರಮ ಸಂಖ್ಯೆ II ರಿಂದ VI ರವರೆಗೆ ಈ ಕೆಳಗೆ ನೀಡಲಾಗಿದೆ.

ಹೊಸ ರೈಲುಗಳ ಆಗಮನ ಮತ್ತು ನಿರ್ಗಮನದ ವೇಳಾಪಟ್ಟಿಯ ವಿವರಗಳನ್ನು ನೈರುತ್ಯ ರೈಲ್ವೆ ವಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿಸಲಾಗಿದ್ದು, ಎಲ್ಲಾ ಪ್ರಯಾಣಿಕರು ಗಮನಿಸಬೇಕು ಎಂದು ನೈರುತ್ಯ ರೈಲ್ವೆಯು ಮನವಿ ಮಾಡುತ್ತಿದೆ. ನಾಳೆ ದಿನಾಂಕ 1 ರಿಂದ ಜಾರಿಗೆ ಬರಲಿರುವ ಹೊಸ ವೇಳಾಪಟ್ಟಿಯ ಹೆಚ್ಚಿನ ವಿವರಗಳಿಗಾಗಿ ಪ್ರಯಾಣಿಕರು ಈ ಕೆಳಗಿನ ಲಿಂಕ್‌ನ್ನು ಕ್ಲಿಕ್ ಮಾಡಿ ಅಥವಾ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ https://swr.indianrailways.gov.in/view_section.jsp?lang=0&id=0,1,808,818,847,1880 ಅಥವಾ 139 ನಂಬರಿಗೆ ಡಯಲ್ ಮಾಡಿ ಮಾಹಿತಿ ಪಡೆದುಕೊಳ್ಳಬಹುದು.

# ಇಂದು ಸಿದ್ಧಗಂಗಾ ಸಂಸ್ಥೆಯ ಪರಿಸರ ಸ್ನೇಹಿ ಪೇಪರ್ ಗಣಪನ ವಿಸರ್ಜನೆ



ದಾವಣಗೆರೆಯ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಗಣೇಶ ಚತುರ್ಥಿಯಂದು ಭವ್ಯ ಮೆರವಣಿಗೆಯ ಮೂಲಕ ಸಾಂಪ್ರದಾಯಿಕವಾಗಿ ಪ್ರತಿಷ್ಠಾಪಿಸಿದ್ದ ಪರಿಸರ ಸ್ನೇಹಿ ಪೇಪರ್ ಗಣಪನ ವಿಸರ್ಜನೆ ಇಂದು ಮಧ್ಯಾಹ್ನ ನಡೆಯಲಿದೆ.

12 ಅಡಿ ಎತ್ತರದ ಹಳೆಯ ನ್ಯೂಸ್ ಪೇಪರ್ ಮತ್ತು ಮೈದಾ ಹಿಟ್ಟಿನ ಅಂಟು ಬಳಸಿ ಇದ್ದಿಲು ಪುಡಿಯ ಬಣ್ಣದಿಂದ ಲೇಪಿತ ಆಕರ್ಷಕ ಹಗುರ ಗಣೇಶ ಎಲ್ಲರ ಗಮನ ಸೆಳೆದಿದ್ದಾನೆ. ಶಾಲೆಯ ಚಿತ್ರಕಲಾ ಶಿಕ್ಷಕರಾದ ಹೀನಾ ಕೌಸರ್, ಸ್ವಾತಿ, ನಟರಾಜ್, ಪ್ರಿಯಾಂಕ ಮತ್ತು ಸಹನ, ಜೊತೆಗೆ ಹೈಸ್ಕೂಲ್‌ನ ವಿದ್ಯಾರ್ಥಿ – ವಿದ್ಯಾರ್ಥಿನಿಯರ ಕರ ಕೌಶಲ್ಯದಿಂದ ಅರಳಿ ನಿಂತ ಈ ಸುಂದರ ಗಣೇಶನನ್ನು ಪ್ರತಿದಿನ ಒಂದೊಂದು ತರಗತಿ ಮಕ್ಕಳು ಪೂಜಿಸಿ, ಭಾವೈಕ್ಯತೆ ಮೆರೆದಿದ್ದಾರೆ.

ತಾವೇ ರೂಪಿಸಿದ ಗಜಮುಖನನ್ನು ಮಕ್ಕಳು ಭಾರವಾದ ಹೃದಯದಿಂದ ಬೀಳ್ಕೊಡಲಿದ್ದಾರೆ. ಶಾಲೆಯ ಮಂಟಪದಲ್ಲಿ ಬೃಹದಾಕಾರದ ವಿದ್ಯಾ ಗಣಪತಿ ಮಕ್ಕಳ ಭಕ್ತಿ ಮತ್ತು ಶ್ರದ್ಧೆಯ ಕೇಂದ್ರವಾಗಿತ್ತು. ಪ್ರಥಮ ಪೂಜಿತ, ವಿಘ್ನ ನಿವಾರಕನ ದರ್ಶನವನ್ನು ಕಳೆದ 12 ದಿನಗಳಿಂದ ಅನೇಕ ಪಾಲಕರು, ಸಾರ್ವಜನಿಕರು ದರ್ಶಿಸಿ ಪುನೀತರಾಗಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕ ಡಾ|| ಜಯಂತ್, ಕಾರ್ಯದರ್ಶಿ ಹೇಮಂತ್ ಹಾಗೂ ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ ತಿಳಿಸಿದ್ದಾರೆ.

ಪೂಜೆ, ಪ್ರಸಾದ ವಿನಿಯೋಗದ ನಂತರ ಮೆರವಣಿಗೆ ಮೂಲಕ ಶನಿವಾರ ತುಂಗಭದ್ರೆಯಲ್ಲಿ ವಿಲೀನಗೊಳಿಸಲಾಗುವುದು.

# 'ಹಲೋ ಕನ್ನಡಿಗ'ದಿಂದ 'ನಿಸರ್ಗ ಸಿರಿ' ಪ್ರಶಸ್ತಿ ಪ್ರದಾನ





ದಾವಣಗೆರೆ, ಸೆ. 29-ನಗರದ 'ಹಲೋ ಕನ್ನಡಿಗ' ವಾರ ಪತ್ರಿಕೆ ವತಿಯಿಂದ ನಿಸರ್ಗ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬರುವ ಅಕ್ಟೋಬರ್ 2ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಿರಸಿಯ ನಿಸರ್ಗ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿರಸಿಯ ನಿಸರ್ಗ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕು. ಶೋಭಾ ವಿ. ಲಮಾಣಿ ಮತ್ತು ವಿನಯ ಪರಮೇಶ್ವರನಾಯ್ಕ ಅವರುಗಳಿಗೆ ನಿಸರ್ಗ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹಲೋ ಕನ್ನಡಿಗ ಸಂಪಾದಕ ಸಿ. ವೇದಮೂರ್ತಿ ತಿಳಿಸಿದ್ದಾರೆ.

ಅನಂತರಾವ್ ಬೀಳಗಿ ಸ್ಮಾರಕ ಶಿರಸಿಯ ನಿಸರ್ಗ ಆಸ್ಪತ್ರೆ ಇವರ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಗಾಂಧಿ ಜಯಂತಿ ಮತ್ತು ನಿಸರ್ಗ ಆಸ್ಪತ್ರೆ ನೂತನ ಕಟ್ಟಡದ 11ನೇ ವಾರ್ಷಿಕೋತ್ಸವದ ಸವಿನೆನಪಿಗಾಗಿ ಹಮ್ಮಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಅನಂತರಾವ್ ಬೀಳಗಿ ಮೆಮೋರಿಯಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಮತ್ತು ವಕೀಲ ಬಿ.ಡಿ. ವಿಶ್ವಾಮಿತ್ರ ಅವರ ಅಧ್ಯಕ್ಷತೆಯಲ್ಲಿ ಹಿರಿಯ ಪತ್ರಕರ್ತರೂ ಆದ ಸಾಹಿತಿ ಜಯರಾಮ ಹೆಗಡೆ (ಶಿರಸಿ) ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಿರಸಿಯ ಹಿರಿಯ ಪತ್ರಕರ್ತ ರಾಜು ಅಜ್ಜಿಬಾಳ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಅನಂತರಾವ್ ಬೀಳಗಿ ಮೆಮೋರಿಯಲ್ ಟ್ರಸ್ಟ್ ಕಾರ್ಯದರ್ಶಿ ರಾಮ ಜೋಶಿ, ಟ್ರಸ್ಟಿ ಡಾ. ಸಂತೋಷ ನಾಡಿಗೇರ್, ಮತ್ತೋರ್ವ ಟ್ರಸ್ಟಿ ಡಾ. ರವಿ ಬಿ. ಸಭಾಹಿತ ಅವರುಗಳು ಅತಿಥಿಗಳಾಗಿದ್ದಾರೆ.

# ಮಲೇಬೆನ್ನೂರಿನಲ್ಲಿ ಇಂದು ಪೌರ ಕಾರ್ಮಿಕರ ದಿನ

ಪುರಸಭೆಯ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ತಿಳಿಸಿದ್ದಾರೆ.

**ಗಣಪತಿ ವಿಸರ್ಜನೆ** : ಎ.ಕೆ. ಕಾಲೋನಿಯಲ್ಲಿ ಪ್ರತಿಷ್ಠಾಪಿಸಿರುವ ಗಣಪತಿ ವಿಸರ್ಜನೆ ಇಂದು ನಡೆಯಲಿದ್ದು, ಅನ್ನ ಸಂತರ್ಪಣೆ ನಂತರ ಮಧ್ಯಾಹ್ನದಿಂದ ರಾತ್ರಿವರೆಗೆ ಗಣಪತಿ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಎ.ಕೆ. ಮರಿಯಪ್ಪ, ಎ.ಕೆ. ಲೋಕೇಶ್ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಈದ್ ಮಿಲಾದ್



ಮಲೇಬೆನ್ನೂರು, ಸೆ. 29- ಪಟ್ಟಣದಲ್ಲಿ ಶುಕ್ರವಾರ ಈದ್ ಮಿಲಾದ್ ಹಬ್ಬದ ಬೃಹತ್ ಮೆರವಣಿಗೆಯನ್ನು ಮುಸ್ಲಿಂ ಬಾಂಧವರು ಸಡಗರ-ಸಂಭ್ರಮದಿಂದ ನಡೆಸಿದರು.

ಗುರುವಾರ ಪಟ್ಟಣದಲ್ಲಿ ವಾರದ ಸಂತೆ ಇದ್ದ ಪ್ರಯುಕ್ತ ಮೆರವಣಿಗೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿತ್ತು.

ಶುಕ್ರವಾರ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ಬಾಂಧವರು, ನಂತರ ಸೈಯದ್ ಹಬೀಬುಲ್ಲಾ ಷಾ ದರ್ಗಾದಲ್ಲಿ ಚಾದರ ಹೊದಿಸಿ ಪ್ರಾರ್ಥನೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಉದ್ದಕ್ಕೂ ಯುವಕರು, ಮಕ್ಕಳು ಹಸಿರು ಬಣ್ಣದ ಜಂಡಾ ಹಿಡಿದು ಸಂಭ್ರಮಿಸಿದರು. ಅಲ್ಲಲ್ಲಿ ತಂಪು ಪಾನೀಯ, ಷರಬತ್ತು ವಿತರಿಸಲಾಯಿತು.

ಮುಖ್ಯ ರಸ್ತೆಯಲ್ಲಿ ಸಾಗಿದ ಮೆರವಣಿಗೆಯು ಪೊಲೀಸ್ ಠಾಣೆ ರಸ್ತೆ, ಸಂತೆ ರಸ್ತೆ, ನಂದಿಗುಡಿ ರಸ್ತೆ ಮೂಲಕ ಶಾದಿ ಮಹಲ್ ತಲುಪಿ ಅಲ್ಲಿ ಅಂತ್ಯಗೊಂಡಿತು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಇನ್‌ಸೈಟ್ ಸಂಸ್ಥೆಯ ಜಿ.ಬಿ. ವಿನಯ್‌ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಪುರಸಭೆ ಸದಸ್ಯರಾದ ಕೆ.ಜಿ. ಲೋಕೇಶ್, ಟಿ. ಹನುಮಂತಪ್ಪ, ಬಿ. ಸುರೇಶ, ಕೆ.ಪಿ. ಗಂಗಾಧರ್, ಭೋವಿಕುಮಾರ್, ಪಿ.ಹೆಚ್. ಶಿವಕುಮಾರ್ ಮತ್ತಿತರರು ಮೆರವಣಿಗೆಯಲ್ಲಿ ಭಾಗವಹಿಸಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು.

ಜುಮ್ಮ ಮಸೀದಿ ಆಡಳಿತಾಧಿಕಾರಿ ಡಾ. ನಿಸಾರ್, ಉಸುರು ಕಮಿಟಿ ಅಧ್ಯಕ್ಷ ಎಂ.ಬಿ. ಖುರ್ಬಾನ್ ಅಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಮುಖಂಡರಾದ ಎಂ.ಬಿ. ರೋಷನ್, ಸೈಯದ್ ಜಾಕೀರ್, ಎಂ.ಬಿ. ಗುಲ್ಜಾರ್, ಸಿ. ಅಬ್ದುಲ್ ಹಾದಿ, ಎಂ.ಬಿ. ಫೈಜು, ಬಿ. ಸೈಫುಲ್ಲಾ, ಬಿ. ರಫೀಕ್, ಪುರಸಭೆ ಸದಸ್ಯರಾದ ಖಲೀಲ್, ನಯಾಜ್, ಸಾಬೀರ್ ಅಲಿ, ಷಾ ಅಬ್ರಾರ್, ಶಬ್ಬೀರ್ ಖಾನ್, ದಾದಾಪೀರ್, ಯುಸೂಫ್, ಅನ್ವರ್ ಭಾಷಾ, ಎಂ.ಬಿ. ರುಸ್ತುಂ, ಜಮೀರ್ ಭಾಷಾ, ಮಾಜಿ ಸದಸ್ಯ ಎ. ಆರೀಫ್ ಅಲಿ, ಚಮನ್ ಷಾ ಸೇರಿದಂತೆ ಇತರರು ಭಾಗವಹಿಸಿದ್ದರು.

ಸಿಪಿಐ ಸುರೇಶ್ ಸಗರಿ ಮತ್ತು ಪಿಎಸ್‌ಐ ಪ್ರಭು ಕೆಳಗಿನಮನಿ ಅವರ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.


## ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

### ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು, ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/ದಾವಾ/103/2019–20ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಛಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ , ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು 1) ಶ್ರೀಮತಿ ಪುಷ್ಪಾ ಜಿ.ಎಸ್ ಕೋಂ ಲೇಟ್ ಸಿದ್ದೇಶ್ ಜಿ.ಎಸ್. 2) ನಿಖಿಲ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಮನೆ ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. | ಇ.ಪಿ.ಸಂಖ್ಯೆ 18/2022–23 ರೂ. 4,86,90,353–00 (ರೂಪಾಯಿ ನಾಲ್ಕು ಕೋಟಿ ಎಂಬತ್ತಾರು ಲಕ್ಷದ ತೊಂಬತ್ತು ಸಾವಿರದ ಮೂರು ನೂರ ಐವತ್ಮೂರು ಮಾತ್ರ) (ದಿನಾಂಕ 25–09–2023 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ. 3581 ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:: ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ : ಖಾಸಗಿ ಕಟ್ಟಡ. | ದಿನಾಂಕ 26–10–2023 ನೇ ಗುರುವಾರ ಮಧ್ಯಾಹ್ನ 12–00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**ಹರಾಜಿನ ಷರತ್ತುಗಳು** :– (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5 ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ**. (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11–00 ಘಂಟೆಯಿಂದ ಸಂಜೆ 5–00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ,
ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ

ದಿನಾಂಕ : 27–09–2023
ಸ್ಥಳ : ದಾವಣಗೆರೆ

ಸಹಿ/–
**ಬಸವರಾಜ್ ಎಂ.**
**ಪ್ರಧಾನ ವ್ಯವಸ್ಥಾಪಕರು**

ಸಹಿ/–
**ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)**
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

# ನಮ್ಮ ಬಳಿ ನೀರು ಇಲ್ಲ, ನೀರು ಬಿಡಲು ಸಾಧ್ಯವಿಲ್ಲ

ಬೆಂಗಳೂರು, ಸೆ.29- ಕಾವೇರಿ ನೀರು ನಿರ್ವಹಣಾ ಮಂಡಳಿ ಹಾಗೂ ಸುಪ್ರೀಂಕೋರ್ಟ್ ಮುಂದೆ ನಾಳೆಯೇ ನಮ್ಮ ಬಳಿ ನೀರು ಇಲ್ಲ, ನೀರು ಬಿಡಲು ಸಾಧ್ಯವಿಲ್ಲ ಎಂದು ಮರುಪರಿಶೀಲನಾ ಅರ್ಜಿ ಹಾಕಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

**ಕಾವೇರಿ: ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ಮರು ಪರಿಶೀಲನೆಗೆ ರಾಜ್ಯದ ಅರ್ಜಿ**

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಅಡ್ವೊಕೇಟ್ ಜನರಲ್ ಅವರೊಂದಿಗೆ ನಡೆದ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶಾಂತಿಯುತವಾಗಿ ಬಂದ್ ನಡೆದಿದ್ದು, ಇದಕ್ಕೆ ಸಹಕರಿಸಿದ ಸಾರ್ವಜನಿಕರನ್ನು, ಸಂಘ - ಸಂಸ್ಥೆಗಳಿಗೆ ಹಾಗೂ ಎಲ್ಲಿಯೂ ಅಹಿತಕರ ಘಟನೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ ಅಧಿಕಾರಿಗಳನ್ನು ಕೂಡ ಅಭಿನಂದಿಸಿದರು.

ನಿವೃತ್ತ ನ್ಯಾಯಾಧೀಶರು ಅವರ ಅನುಭವದ ಆಧಾರದ ಮೇಲೆ ಕೆಲವು ಅಭಿಪ್ರಾಯ, ಸಲಹೆಗಳನ್ನು ನೀಡಿದ್ದಾರೆ. ಅವರ ಸಲಹೆಗಳನ್ನು ಪರಿಗಣಿಸಿ, ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು ಎಂದರು. ಮುಖ್ಯವಾಗಿ ರಾಜ್ಯದ ನೀರಾವರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪರಿಣಿತರ ಸಲಹಾ ಸಮಿತಿಯನ್ನು ರಚಿಸಿ, ಡಾಟಾ ಸಂಗ್ರಹ, ಸಲಹೆ ನೀಡುವ ಕಾರ್ಯವನ್ನು ಮಾಡಬೇಕು. ಅಂತರರಾಜ್ಯ ಜಲವಿವಾದಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಸೂಚನೆ, ಕಾನೂನು ತಂಡಕ್ಕೆ ಮಾಹಿತಿ ನೀಡಲು ಕೂಡ ಸಮಿತಿ ಅಗತ್ಯ ಎನ್ನುವ ಸಲಹೆ ಬಂದಿದೆ. ಇದರಂತೆ ಕ್ರಮ ವಹಿಸಲಾಗುವುದು ಎಂದು ವಿವರಿಸಿದರು.

ತಮಿಳುನಾಡಿಗೆ 3000 ಕ್ಯೂಸೆಕ್ ನೀರು ಬಿಡುವ ಬಗ್ಗೆ ಎರಡೂ ಸಮಿತಿಗಳ ಮುಂದೆ ನಮ್ಮಲ್ಲಿ ನೀರು ಇಲ್ಲ. ಹಾಗಾಗಿ ನೀರು ಬಿಡಲು ಸಾಧ್ಯವಿಲ್ಲ ಎಂದು ವಾದ ಮಂಡಿಸಲಾಗಿದೆ. ಹಳೇ ಬಾಕಿ ಸರಿದೂಗಿಸಬೇಕು ಎಂದು 3000 ಕ್ಯೂಸೆಕ್ ನೀಡಲು ಸೂಚಿಸಿದ್ದಾರೆ. ನಿರ್ವಹಣಾ ಮಂಡಳಿ ಹಾಗೂ ಸುಪ್ರೀಂಕೋರ್ಟ್ ಮುಂದೆ ಮರುಪರಿಶೀಲನಾ ಅರ್ಜಿ ಹಾಕುವಂತೆಯೂ ಸೂಚಿಸಿದ್ದಾರೆ ಎಂದರು.

ಮೇಕೆದಾಟು ಯೋಜನೆಯ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಪ್ರಸ್ತಾಪ ಮಾಡಬೇಕು. ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ತೊಂದರೆ ಇಲ್ಲ. ಹಾಗಾಗಿ ತೀವ್ರವಾಗಿ ಇದನ್ನು ಮಂಡಿಸಬೇಕು ಎಂದು ಸಲಹೆ ನೀಡಿದ್ದಾರೆ. ಮೇಕೆದಾಟು ಬ್ಯಾಲೆನ್ಸಿಂಗ್ ಜಲಾಶಯವಾಗಿ 67 ಟಿಎಂಸಿ ನೀರು ಸಂಗ್ರಹ ಮಾಡುವ ಸಾಮರ್ಥ್ಯ ಹೊಂದಲಿದೆ. ವಿದ್ಯುತ್ ಹಾಗೂ ಕುಡಿಯುವ ನೀರಿಗೆ ಅದನ್ನು ಬಳಸಲಾಗುವುದು. ಸಂಕಷ್ಟ ಬಂದಾಗ ತಮಿಳುನಾಡಿಗೆ ನೀರು ಬಿಡಬಹುದು ಎಂದು ಸಲಹೆ ನೀಡಿದ್ದಾರೆ ಎಂದರು. ಸಂದರ್ಭ ಬಂದರೆ ವಿಶೇಷ ಅಧಿವೇಶನ ಕರೆಯಲಾಗುವುದು. ಉದ್ದೇಶಪೂರ್ವಕವಾಗಿ ಆದೇಶ ಪಾಲನೆಯಾಗದಿದ್ದಾಗ ಮಾತ್ರ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಮೆಡ್ಲೇರಿಯಲ್ಲಿಂದು ಆರೋಗ್ಯ ತಪಾಸಣೆ

ರಾಣೇಬೆನ್ನೂರು ತಾಲ್ಲೂಕಿನ ಮೆಡ್ಲೇರಿಯ ಗಜಾನನ ಯುವಕ ಮಂಡಳದ ವತಿಯಿಂದ ಇಂದು ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದ್ದು, ಮಂಗಳೂರು ಜಿ. ಆರ್. ಆಸ್ಪತ್ರೆ ವೈದ್ಯರು ತಪಾಸಣೆ ಮಾಡುವರು. ನಂತರ ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಶ್ರೀಗಳ ಸಾನ್ನಿಧ್ಯದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

# ಕಾವೇರಿಗಾಗಿ ದಾವಣಗೆರೆ ಭಾಗಶಃ ಬಂದ್













**(1ನೇ ಪುಟದಿಂದ)** ಹುಚ್ಚವ್ವನಹಳ್ಳಿ ಮಂಜುನಾಥ್, ಹೆಚ್.ಜಿ. ಉಮೇಶ್, ಐರಣಿ ಚಂದ್ರು, ಬಿ.ಪ್ರವೀಣ್, ನಾಗರಾಜ್, ನಿಂಗಪ್ಪ, ಹನುಮಂತಪ್ಪ, ನಿಂಗಣ್ಣ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆಯಿಂದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ ನಂತರ ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಈ ವೇಳೆ ಸಂಸ್ಥಾಪಕ ರಾಜ್ಯಾಧ್ಯಕ್ಷ ವಿ.ಅವಿನಾಶ್, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಾಲಾ ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಗಣೇಶ್ ಎಸ್., ಫಯಾಜ್ ಅಹ್ಮದ್, ಚಮನ್ ಷರೀಫ್, ಈರಣ್ಣ ಎನ್.ಎಸ್., ಗೌಸ್ ಪೀರ್, ಶಾಂತಮ್ಮ, ಮಮ್ತಾಜ್, ನಾಗರಾಜ್, ಕೆ.ಹುಲಿಕುಂಟೇಶ್ವರ್, ಸುಲೇಮಾನ್, ನಿಂಗರಾಜ್, ಜೆ.ಜಗದೀಶ್, ಶರಣೇಶ್, ಶರಣಪ್ಪ ಅಂಬಾರಿ, ನಟರಾಜ್, ಹನುಮಂತಪ್ಪ, ಅಕ್ಬರ್ ಭಾಷಾ, ಸುನಿತ್ ಇತರರು ಈ ಸಂದರ್ಭದಲ್ಲಿದ್ದರು.

ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟ, ಡಾ. ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ರಾಜರತ್ನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದಿಂದ ಕರ್ನಾಟಕ ಬಂದ್ ಬೆಂಬಲಿಸಿ ದಾವಣಗೆರೆ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾಧ್ಯಕ್ಷ ಯೋಗೇಶ್, ಪದಾಧಿಕಾರಿಗಳಾದ ಜಿ.ಸಿ. ಶ್ರೀನಿವಾಸ್, ಶಿವಕುಮಾರ್, ಧರ್ಮರಾಜ್, ಮುರಳಿ, ಪರಶುರಾಮ್, ಅಜಯ್, ಅಂಜಿನಪ್ಪ ಇತರರು ಇದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯಿಂದಲೂ ಪ್ರತಿಭಟನೆ ನಡೆಸಲಾಯಿತು. ರಾಜ್ಯಾಧ್ಯಕ್ಷ ನಿಂಗರಾಜ್‌ಗೌಡ್ರು, ರಾಜ್ಯ ಮಹಿಳಾ ಕಾರ್ಯಾಧ್ಯಕ್ಷೆ ಎನ್.ಎಸ್. ಸುವರ್ಣಮ್ಮ, ನಾಗವೇಣಿ, ಕಸ್ತೂರಮ್ಮ, ಸುಜಾತ, ಭಾಗ್ಯಲಕ್ಷ್ಮಿ, ಸುನಿತಾ, ರೇಖಾ, ಶಾಂತಮ್ಮ, ಯಶೋಧಮ್ಮ, ಅನುಷಾ, ಆಶಾ, ಮಂಜುನಾಥ್ ಅಣಜಿ, ಶಿವಕುಮಾರ್ ಅಣಜಿ, ರಾಘವೇಂದ್ರ, ನಾಗರಾಜ ಅಣಜಿ, ರಘು ಇತರರಿದ್ದರು.

ಜೈ ಕರುನಾಡ ವೇದಿಕೆ ಜಿಲ್ಲಾ ಘಟಕದಿಂದ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ, ಡಿ.ಎಸ್.ಕೆ. ಪರಶುರಾಮ್, ಜಿಲ್ಲಾಧ್ಯಕ್ಷ ಪರಶುರಾಮ ನಂದಿಗಾವಿ, ಪ್ರಧಾನ ಕಾರ್ಯದರ್ಶಿ ಇ.ಮಂಜುನಾಥ್ ಬಾಳೆಕಾಯಿ ಹಾಗೂ ಪದಾಧಿಕಾರಿಗಳು ಇದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಕನ್ನಡ ಸೇನೆ ಜಿಲ್ಲಾ ಸಮಿತಿ ನಡೆಸಿದ ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಕೆ.ಎಂ. ಚನ್ನಬಸಪ್ಪ ಇತರರಿದ್ದರು.

ಕನ್ನಡ ಚಳವಳಿ ಕೇಂದ್ರ ಸಮಿತಿ, ಡಾ. ರಾಜ್ ಅಭಿಮಾನಿಗಳ ಸಂಘ, ಅಖಂಡ ಕರ್ನಾಟಕ ರಕ್ಷಣಾ ವೇದಿಕೆ, ಕರವೇ (ಪ್ರವೀಣ ಶೆಟ್ಟಿ ಬಣ), ಜಯ ಕರ್ನಾಟಕ, ಜೈ ಕರುನಾಡ ವೇದಿಕೆ, ಗಜ ಸೇನೆ, ಸುವರ್ಣ ಕರ್ನಾಟಕ ವೇದಿಕೆ, ಶಂಕರ್‌ನಾಗ್ ಅಭಿಮಾನಿಗಳ ಆಟೋ ಬಳಗ, ದಲಿತ ಸೇನೆ, ದಲಿತ ಸೇನಾ ಸಮಿತಿ, ಕರ್ನಾಟಕ ನವ ನಿರ್ಮಾಣ ಸೇನೆ, ಸ್ನೇಹ ಸಂಘ, ಕರ್ನಾಟಕ ಕದಂಬ ಸೇನೆ, ಕನ್ನಡ ನಾಡು ಸಮರ ಸೇನೆ, ದಾವಣಗೆರೆ ಕಟ್ಟಡ ಕಾರ್ಮಿಕರ ಅಸಂಘಟಿತ ವೇದಿಕೆ, ವಿಷ್ಣು ಸೇನಾ ಸಮಿತಿ, ಕರ್ನಾಟಕ ಕನ್ನಡ ಸೇನೆ, ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಜೈ ಕರುನಾಡ ವೇದಿಕೆ, ರೈತ ಸಂಘ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣ) ಸೇರಿದಂತೆ ಹಲವು ಸಂಘಟನೆಗಳು ಬಂದ್ ಬೆಂಬಲಿಸಿ ಪ್ರತಿಭಟನೆ ನಡೆಸಿದವು.

## ಡಿಸಿ ಕಚೇರಿ ಎದುರು ರೈತ ಸಂಘ ಪ್ರತಿಭಟನೆ




ಶೀಘ್ರದಲ್ಲಿ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುಖಾಂತರ ಕಾವೇರಿ ನೀರಿಗೆ ಪರ್ಯಾಯ ಸುರಕ್ಷತಾ ಕ್ರಮಕ್ಕೆ ಮುಂದಾಗಬೇಕು ಎಂಬುದು ಸೇರಿದಂತೆ, ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಸಮಿತಿಯಿಂದ ಇಲ್ಲಿನ ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಪಿ.ಪಿ. ಮರುಳಸಿದ್ದಯ್ಯ, ರಾಜ್ಯ ಗೌರವಾಧ್ಯಕ್ಷ ಕುರುವ ಗಣೇಶ್, ಹೊನ್ನೂರು ಮುನಿಯಪ್ಪ, ಕೆ. ಜಿ ಶೇಖರಪ್ಪ, ಜಿ. ಹೊನ್ನೂರು ರಾಜು, ಕೆ. ವಿ. ರುದ್ರಮುನಿ, ನಾಗಾನಾಯ್ಕ, ಗೋಶಾಲೆ ಬಸವರಾಜ್, ಕಣಿವೆ ಬಿಳಚಿ ಅಣ್ಣಪ್ಪ, ಮಾಯಕೊಂಡ ಬೀರಪ್ಪ, ಕೆ.ಬಿ.ಮಲ್ಲೇಶಪ್ಪ, ಸಂತೋಷನಾಯ್ಕ, ಮಲ್ಲೇನಹಳ್ಳಿ ನಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

## ಸರ್ಕಾರದ ಸೌಲಭ್ಯ ಪಡೆದು, ಸ್ವಾವಲಂಬಿ ಜೀವನ ನಡೆಸಿ

**(1ನೇ ಪುಟದಿಂದ)** ಫಲಾನುಭವಿಗಳಿಗೆ 46 ಹೊಲಿಗೆ ಯಂತ್ರ, 42 ಜೆರಾಕ್ಸ್ ಯಂತ್ರ, 62 ಟ್ಯಾಬ್, 124 ಲ್ಯಾಪ್‌ಟಾಪ್ ಸೇರಿದಂತೆ 294 ಫಲನುಭವಿಗಳಿಗೆ ಸೌಲಭ್ಯಗಳ ವಿತರಣೆ ಮಾಡಲಾಗಿದೆ ಎಂದು ಹೇಳಿದರು. ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ನಿಂಗಪ್ಪ ಚಂದಪೂರ್, ಸದಸ್ಯರಾದ ಗುತ್ತೂರು ಜಂಬಣ್ಣ , ಹನುಮಂತಪ್ಪ, ಪಕ್ಕಿರಮ್ಮ ಸುಮಿತ್ರಾ , ನಾಗರತ್ನ, ಪಿ.ಎನ್. ವಿರುಪಾಕ್ಷಪ್ಪ, ಮುಜಾಮಿಲ್ ಬಿಲ್ಲು, ಷಹಜಾದ್ ಸನಾವುಲ್ಲಾ, ನಗರಸಭೆ ಅಧಿಕಾರಿಗಳಾದ ಲಕ್ಷ್ಮಣ, ಜಗದೀಶ್, ರವಿಪ್ರಕಾಶ್, ಸಿಬ್ಬಂದಿಗಳಾದ ವೀಣಾ, ಲತಾ, ಮಮತಾ, ಜೆಡಿಎಸ್ ಪಕ್ಷದ ಮುಖಂಡರಾದ ಸುರೇಶ್ ಚಂದಪೂರ್, ಮಂಜುನಾಥ್ ಫೈನಾನ್ಸ್ ಮತ್ತಿತರರು ಉಪಸ್ಥಿತರಿದ್ದರು.

## ಆಯೋಗ ಶಿಫಾರಸ್ಸು

**(1ನೇ ಪುಟದಿಂದ)** ಎಂದು ಆಯೋಗ ಹೇಳಿದೆ. ಕೇಂದ್ರ ಕಾನೂನು ಸಚಿವ ಅರ್ಜುನ್ ಮೆಘ್ವಾಲ್ ಅವರಿಗೆ ಪತ್ರ ಬರೆದಿರುವ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ, ತಂತ್ರಜ್ಞಾನದ ಬೆಳವಣಿಗೆ ಅಗಾಧವಾಗಿದೆ. ಈ ಸಂದರ್ಭದಲ್ಲಿ ಹಳೆಯ ಕಾಲದ ಎಫ್.ಐ.ಆರ್. ವ್ಯವಸ್ಥೆ ಮುಂದುವರೆಸುವುದು ಸೂಕ್ತವಲ್ಲ ಎಂದಿದ್ದಾರೆ.

## ಹಿಂದೂ ವಿರಾಟ ಗಣಪತಿ ಇಂದು ಅನ್ನ ಸಂತರ್ಪಣೆ



ರಾಣೇಬೆನ್ನೂರು

ರಾಣೇಬೆನ್ನೂರಿನ ಅಶೋಕ ಸರ್ಕಲ್‌ನಲ್ಲಿ ಪ್ರತಿಷ್ಠಾಪಿಸಿರುವ ಹಿಂದೂ ವಿರಾಟ ಮಹಾಸಭಾ ಸಮಿತಿಯ ಗಣೇಶನ ವಿಸರ್ಜನೆ ಸೋಮವಾರ ನಡೆಯಲಿದ್ದು, ಇಂದು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸೋಮವಾರ ಬೆಳಿಗ್ಗೆ ಗಣೇಶನ ಮೆರವಣಿಗೆ ಪ್ರಾರಂಭಗೊಂಡು, ಪ್ರಮುಖ ಬೀದಿಗಳಲ್ಲಿ ಹಾಯ್ದು ರಾತ್ರಿ 10 ಗಂಟೆಗೆ ತುಂಗಭದ್ರಾ ನದಿಯಲ್ಲಿ ವಿಸರ್ಜನೆಗೊಳ್ಳ ಲಿದೆ. ಮೆರವಣಿಗೆ ತೆರಳುವ ಪ್ರಮುಖ ಸ್ಥಳಗಳಲ್ಲಿ ಹಲಗೇರಿಯ ಶಿವಪುತ್ರಪ್ಪ ಹರಿಯಾಳದ ಅನ್ನದ ಹಾಗೂ ನೀರಿನ ಪಾಕೆಟ್ ವಿತರಿಸಲಾಗುವುದು ಹಾಗೂ ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಡಿಜೆ ಗಳನ್ನು ತರಿಸಲಾಗಿದೆ ಎಂದು ಕಮಿಟಿಯ ಅಧ್ಯಕ್ಷ ನಾಗರಾಜ ಪವಾರ ತಿಳಿಸಿದರು. ಅವರ ಜೊತೆ ಪರಮೇಶ ಗೂಳಣ್ಣನವರ, ಬಸವರಾಜ ಹುಲ್ಲತ್ತಿ ಮತ್ತಿತರರಿದ್ದರು.


**ಮಾರುತಿ ಕಾರ್ ಬೇಕಿದೆ**
2019 ನಂತರದ ಮಾಡಲ್ ಸಿಂಗಲ್ ಓನರ್ ಇರುವ ಮಾರುತಿ 800/ALTO/k10/ lxi/vxi ಬೇಕಿದೆ.
ಕಿರಣ್ ಬೂಸ್ನೂರ್ : 97315-63409
ಕಾರ್ ಏಜೆಂಟ್ ಸಹ ಸಂಪರ್ಕಿಸಬಹುದು

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್ 30x40 ಪಶ್ಚಿಮ, 30x40 ಪೂರ್ವ 30x50 ಪೂರ್ವ, 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಭೂಸನೂರ್ : 98440-63409
ಬೆಂಗಳೂರು ಮತ್ತು ಮೈಸೂರಿನಲ್ಲೂ ಸಹ ಬೇಕಾಗಿದೆ

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ,**
E-swathu, Khatha Change Building Licence & Property Documents, Loans-All banks
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಲೀಸ್‌ಗೆ ಇದೆ**
1BHK ವಿತ್ ಅಟ್ಯಾಚ್ ಇರುವ ಎರಡನೇ ಮಹಡಿ ಮನೆ ಲೀಸ್‌ಗೆ ಇದೆ. ಇಚ್ಛೆ ಉಳ್ಳವರು, #389/G-54 ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ ಜಯನಗರ, ದಾವಣಗೆರೆ ಇಲ್ಲಿ ಸಂಪರ್ಕಿಸಿ.
98447 10844, 88843 62134

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x50 ಪಶ್ಚಿಮಕ್ಕೆ ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
97425 12125

**ಬಾಡಿಗೆಗೆ ಇದೆ**
ರೆಡಿ ಡಾಬಾ ಗೋಡೌನ್ ಎಲ್ಲಾ ಸೌಕರ್ಯ ಇದೆ.
90080 60660

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥ್‌ರೈಟಿಸ್) ಬೆಂಗಳೂರು ಇವರು
ದಿ.4.10.2023ರ ಬುಧವಾರ
ದಿ.5.10.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ, 3 ಎಕರೆ 23 ಗುಂಟೆ ಬೋರ್‌ವೆಲ್ ಇರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501
76196 37007

**ಮನೆ ಬಾಡಿಗೆಗೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ಉತ್ತರಾಭಿಮುಖದಲ್ಲಿರುವ 1ನೇ ಮಹಡಿ, 3 ಬೆಡ್ ರೂಂ, ಡುಪ್ಲೆಕ್ಸ್ ಮನೆ, # 631, ನಿಜಲಿಂಗಪ್ಪ ಬಡಾವಣೆ, 2ನೇ ಮೇನ್, 9ನೇ ಕ್ರಾಸ್, ಅಮೃತಾನಂದಮಯಿ ಶಾಲೆ ಹತ್ತಿರ, ದಾವಣಗೆರೆ.
90606 00090, 74115 87570

**ಮನೆ ಬಾಡಿಗೆಗೆ ಬೇಕಾಗಿದೆ**
2 ಅಥವಾ 3 ಬೆಡ್ ರೂಂ ಮನೆ, ಗ್ರೌಂಡ್ ಫ್ಲೋರ್, ಎಂಸಿಸಿ ಎ ಬ್ಲಾಕ್, ಬಿ ಬ್ಲಾಕ್ ಅಥವಾ ಪಿಜೆ ಬಡಾವಣೆಯಲ್ಲಿ ಮನೆ ಬಾಡಿಗೆಗೆ ಬೇಕಾಗಿದೆ.
88924 69449

**ಮಲೇಬೆನ್ನೂರಿನಲ್ಲಿ ಜಮೀನು ಮಾರಾಟಕ್ಕಿದೆ**
ಮಲೇಬೆನ್ನೂರಿನಿಂದ ವಡೆಯರ ಬಸಾಪುರ ಹೋಗುವ ರಸ್ತೆ ಬಲ ಭಾಗದಲ್ಲಿ 1 ಎಕರೆ 28 ಗುಂಟೆ ನೀರಾವರಿ ಜಮೀನು ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ ) ಆಸಕ್ತರು ಸಂಪರ್ಕಿಸಿ :
99866 94920, 70907 43891

**ಬೇಕಾಗಿದ್ದಾರೆ**
ದಾವಣಗೆರೆ ಎ.ಪಿ.ಎಂ.ಸಿ. ಮಾರುಕಟ್ಟೆಯ ದಲ್ಲಾಲಿ ಅಂಗಡಿಗೆ ಅನುಭವವುಳ್ಳ ಗುಮಾಸ್ತರು ಬೇಕಾಗಿದ್ದಾರೆ.
94496 09805

**ಶಿಕ್ಷಕರು ಬೇಕಾಗಿದ್ದಾರೆ**
CBSE 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗೆ ಸಂಜೆಯ ಸಮಯದಲ್ಲಿ ಮನೆಗೆ ಬಂದು ಪಾಠ ಹೇಳಿಕೊಡಲು ನುರಿತ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ.
63646 46544
91130 26252

**SJV MART**
ಸನ್ನಿಧಿ ಟ್ರೇಡಿಂಗ್ ಕೋ.
ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ. ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್.
ಮೊ : 89045 80039
89045 80034, 89045 80036

**ಕೆಲಸಕ್ಕೆ ಬೇಕಾಗಿದ್ದಾರೆ**
ಮೋಟೋ ವಾಷ್‌ನಲ್ಲಿ ಕಾರ್ ಮತ್ತು ಸ್ಕೂಟರ್, ಬೈಕ್ ವಾಟರ್ ವಾಷ್ ಮಾಡಲು ಅನುಭವಿ ಯುವಕರು ಬೇಕಾಗಿದ್ದಾರೆ. ವಿಚಾರಿಸಿ :
80730 70936, 86182 19879

**ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಪೂರ್ವ 30x50, ಆಂಜನೇಯ ಬಡಾವಣೆ ಉತ್ತರ 30x40 (3 floor) ಶಿವಕುಮಾರ ಸ್ವಾಮಿ ಬಡಾವಣೆ ಉತ್ತರ 30x41 (2 floor)
ಯಲವಟ್ಟಿ ಕರಿಬಸಪ್ಪ
86604 14918

**ಸೈಟು ಮಾರಾಟಕ್ಕೆ**
ಸರಸ್ವತಿ ನಗರ 30x40, 30x50, Hitech 30x40, ರಾಘವೇಂದ್ರ 30x40, ಜಯನಗರ 30x40 ಸೈಟುಗಳು ಮಾರಾಟಕ್ಕಿವೆ.
ಏಜೆಂಟ್ ಶಾಂತಪ್ಪ ಪೂಜಾರಿ
99647 29123

**2 ಖಾಲಿ ನಿವೇಶನಗಳು ಮಾರಾಟಕ್ಕಿವೆ**
ನಿವೇಶನ ಸಂಖ್ಯೆ 33 ಕೊಂಡಜ್ಜಿ ರಸ್ತೆ, ಪೆಟ್ರೋಲ್ ಬಂಕ್ ಹತ್ತಿರ, ಡಬಲ್ ರೋಡ್ ಒಳಗೆ, ದಾವಣಗೆರೆಯಲ್ಲಿ 60x36 ಅಂದಾಜು ಅಳತೆಯಲ್ಲಿದೆ.
95380 80899, 96326 89119

**ಮಳಿಗೆ ಬಾಡಿಗೆ ಇದೆ**
2ನೇ ಮೇನ್, 2ನೇ ಕ್ರಾಸ್, ಎಸ್.ಎಸ್. 'ಬಿ' ಬ್ಲಾಕ್, ದಾವಣಗೆರೆ. ಅಳತೆ 8x10.
ಸಂಪರ್ಕಿಸಿ :
98444 22536

**HOME LOAN**
House Mortgage Loans, House Purchase Loans, House Construction Loans, Bussiness Loans, Commercial Building Loans, Rural Housing Loan Agricultural Loans.
Contact : 98455 87805

**WANTED FEMALE RECEPTIONIST**
Age : 20 to 27years,Quli : PUC/Any degree
Kannada, English, Hindi
12k to 15k Per Month
HAIRPOINT UNISEX SALON
MCC B block, near water tank park, Davangere
97386 64400, 91483 19342

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ ಸೈಟ್ ಇದೆ. ಮಾರಾಟಕ್ಕೆ 30x40 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕೆ ಇದೆ. ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರಾ ಹೋಟೆಲ್ ಹತ್ತಿರ 30x55 (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ. ದಕ್ಷಿಣ ದಿಕ್ಕು 30x43 ಉತ್ತರ ದಿಕ್ಕು ಶ್ರೀ ಸಾಮಾನ್ಯದಲ್ಲಿ ಇದೆ. ಸಂಪರ್ಕಿಸಿ. ಸುರೇಶ
84314 00907

**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ ಇದೆ**
ವಸಂತ ಟಾಕೀಸ್ ಹತ್ತಿರ (ಶ್ರೀ ಈಶ್ವರಿ ಕ್ರಿಯೇಷನ್ಸ್) ಎರಡನೇ ಮಹಡಿ 810 Sq.ft, ಫೈನಾನ್ಸ್, ಸೊಸೈಟಿ ಏಜೆನ್ಸೀಸ್ / ಆಡಿಟ್ ಆಫೀಸ್‌ಗಳಿಗೆ ಬಾಡಿಗೆಗೆ ಇದೆ. ವಿಚಾರಿಸಿರಿ. ಹಾಗೂ 3ನೇ ಮಹಡಿ ಸಿಂಗಲ್ ಬೆಡ್ ರೂಂ ಸಹ ಬಾಡಿಗೆಗೆ ಇದೆ.
ಶಿವಕುಮಾರ ಎಂ.ವಿ.
94484 06702

**ತಕ್ಷಣ ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಕ್ಯಾಪ್ಟನ್, ಸಪ್ಲೈಯರ್ (Steward) ಬೇಕಾಗಿದ್ದಾರೆ.
ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು.
ಸಂಪರ್ಕಿಸಿ :
88846 30532, 99726 98591

**ಬೇಕಾಗಿದ್ದಾರೆ**
ಫರ್ನಿಚರ್ಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ವಿಳಾಸ :
ಕಿರಣ್ ಎಂಟರ್ ಪ್ರೈಸಸ್, 4ನೇ ಮುಖ್ಯರಸ್ತೆ, 1ನೇ ಅಡ್ಡ ರಸ್ತೆ, ವಿನೋಬ ನಗರ, ದಾವಣಗೆರೆ.
ಸಮಯ : ಬೆಳಿಗ್ಗೆ 9.30ರಿಂದ ಸಂಜೆ 7ರವರೆಗೆ
90365 48742

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್, 9ನೇ ಮುಖ್ಯ ರಸ್ತೆಗೆ ಪೂರ್ವ ಮುಖದ 24x60 ಅಡಿ ಅಳತೆಯ ಖಾಲಿ ನಿವೇಶನ ಮಾರಾಟಕ್ಕೆ ಇದೆ. ಸಂಪರ್ಕಿಸಿ.
Mohan Real Estate Agencies
97424 34049

**ಡ್ರೈವರ್ ಬೇಕಾಗಿದ್ದಾರೆ**
TATA Ace / Ashoka Lelyand
70190 51306

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವರು ಬೇಕಾಗಿದ್ದಾರೆ. ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್, Mama's joint road ಮತ್ತು ಪ್ರಕಾಶ್ ಕಾಫಿ ವರ್ಕ್ಸ್, ವಿಜಯಲಕ್ಷ್ಮಿ ರಸ್ತೆ.
99004 38052, 97401 53513

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆಯ ಪಿ. ಬಿ. ರಸ್ತೆಯಲ್ಲಿರುವ ಜೈನ್ ಟೆಂಪಲ್ ಹಿಂಭಾಗದಲ್ಲಿ ಪಿಬಿ ರಸ್ತೆ ಹಾಗೂ NH-4 ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುತ್ತಿರುವ ನಿವೇಶನಗಳನ್ನು ಸುಲಭ 3 ಕಂತುಗಳಲ್ಲಿ prebooking ಮಾಡಿಕೊಳ್ಳಲಾಗುತ್ತಿದೆ. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.
90192 33241, 90198 88512
70196 18397

**KASHMIR TOURS**
Dep : 11th OCT 6 Days
DUBAI 4th NOV 5 Days
All inclusive Group Tours
DVG WORLD TOURS
99006 66122

**ಬೇಕಾಗಿದ್ದಾರೆ**
ಶೀಘ್ರದಲ್ಲೇ ಸೊಸೈಟಿ ಪ್ರಾರಂಭ
ಪಿಯುಸಿ ಆದವರು Male or Female
B.com Male/Female
ಅನುಭವವುಳ್ಳವರು ಹಾಗೂ ಪಿಗ್ಮಿ ಕಲೆಕ್ಟರ್ ತಕ್ಷಣ ಬೇಕಾಗಿದ್ದಾರೆ
79751 07268

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮನೆ /ಮಳಿಗೆ ಬಾಡಿಗೆಗೆ ಇದೆ**
S.S. Hitech ಆಸ್ಪತ್ರೆ ಹತ್ತಿರವಿರುವ ಲಕ್ಷ್ಮಿ ಲೇಔಟ್‌ನಲ್ಲಿರುವ ಅರುಣಾ ಅಪಾರ್ಟ್‌ಮೆಂಟ್‌ನಲ್ಲಿ 2/3 ಬೆಡ್‌ರೂಂ ಮನೆ ಬಾಡಿಗೆಗೆ ಇದೆ ಹಾಗೂ ಗೋಡೌನ್ ಮಾಡಲಿಕ್ಕೆ ಅನುಕೂಲವಾಗಿರುವ ಮಳಿಗೆ ಬಾಡಿಗೆಗೆ ಇದೆ.
96388 17967, 73380 43912

**LOAN And INSURANCE**
ಹೋಮ್‌ಲೋನ್ ಬ್ಯುಸಿನೆಸ್ ಲೋನ್, ಸ್ಯಾಲರಿ ಲೋನ್ ಮತ್ತು ಎಲ್ಲಾ ತರಹದ ವಾಹನಗಳ ಇನ್ಸೂರೆನ್ಸ್‌ಗಾಗಿ ಸಂಪರ್ಕಿಸಿ.
ಮೊ : 74061 01333


**ಜಮೀನು ಮಾರಾಟಕ್ಕೆ ಇವೆ**
ಅಡಿಕೆ ತೋಟ 11 1/2 ಎಕರೆ ಕುಕ್ಕುವಾಡ ಹತ್ತಿರ, ಲೋಕಿಕೆರೆ ಹತ್ತಿರ 3 ಎಕರೆ, ಅಡಿಕೆ ತೋಟ ಇದೆ, ಮಲ್ಲಶೆಟ್ಟಿ ಹಳ್ಳಿ ಹತ್ತಿರ 2 ಎಕರೆ ಇದೆ.
ಏಜೆಂಟರು S ಯಲ್ಲೋಜಿರಾವ್
97418 11694

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ತಕ್ಷಣ ಸಂಪರ್ಕಿಸಿ**
ಮಹಿಳೆ, ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಬೇಕಾಗಿದ್ದಾರೆ. ಸಂಪರ್ಕಿಸಿ :
ESI & PF ಮತ್ತು ಊಟ, ವಸತಿ ಸೌಲಭ್ಯವಿದೆ.
88844 99983

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86603 81629
98449 76176

**ಬೇಕಾಗಿದ್ದಾರೆ**
ಟ್ಯಾಲಿ ಆಪರೇಟರ್ -2 (ಮಹಿಳೆಯರು) ಮತ್ತು ಪಾರ್ಟ್ ಟೈಂ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ದ್ವಾರಕಾ ಟ್ರೇಡರ್ಸ್
ಡ್ರೈ ಫ್ರೂಟ್ಸ್ ಶಾಪ್, ಮಸಾಲಾ ಶಾಪ್, ಎಂ.ಜಿ.ರೋಡ್, ದಾವಣಗೆರೆ.
ಮೊ: 9108322256

**ತಕ್ಷಣ ಬೇಕಾಗಿದ್ದಾರೆ**
ಅನುಭವವುಳ್ಳ ಬೆಣ್ಣೆ ದೋಸೆ ಭಟ್ಟರು ಬೆಂಗಳೂರಿನಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕ ವೇತನ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ :
86609 35720

**ಸಬ್ ಕಾ ಮಾಲೀಕ್ ಏಕ್ ಹೈ**
**ಜ್ಯೋತಿಷ್ಯ ಫಲಂ**
**ಪಂಡಿತ್ ಗಿಡ್ಡಪ್ಪ**
ಇವರು ನುಡಿದಂತೆ ನಡೆಯುವರು. ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ, ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಮನೆಯಲ್ಲಿ ಅಶಾಂತಿ, ಗಂಡ-ಹೆಂಡತಿ ಕಲಹ. ನಿಮ್ಮ ಯಾವುದೇ ಸಮಸ್ಯೆಗೆ ದೂರವಾಣಿ ಮುಖಾಂತರ 2 ದಿನಗಳಲ್ಲಿ ಪರಿಹಾರ.ಇಂದೇ ಕರೆ ಮಾಡಿ. ನಿಮ್ಮ ನಂಬಿಕೆಗೆ ಇಲ್ಲಿ ಮೋಸವಿಲ್ಲ.
ಮೊ : 98801 44819

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**Vijaya Lakshmi Water Purifier Sales & Service**
Call & GET 1 Free Service
96202 47019

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

# ಸದೃಢ ಸಂಘಟನೆಗೆ ವಿಶ್ವಕರ್ಮ ಸಮುದಾಯ ಮುಂದಾಗಲಿ

## ಹೊನ್ನಾಳಿ ಕಾರ್ಯಕ್ರಮದಲ್ಲಿ ವಡ್ನಾಳ್ ಶ್ರೀ ವಿಶ್ವಕರ್ಮ ಮಹಾಸಂಸ್ಥಾನ ಸಾವಿತ್ರಿ ಪೀಠದ ಅಷ್ಟೋತ್ತರ ಶತಶ್ರೀ ಶಂಕರಾತ್ಮನಾಂದ ಸರಸ್ವತಿ ಸ್ವಾಮೀಜಿ ಕರೆ



ಹೊನ್ನಾಳಿ, ಸೆ. 29- ವಿಶ್ವಕರ್ಮ ಸಮಾಜದವರು ಜೀವನ ನಿರ್ವಹಣೆಗೆ ಪಂಚ ಕೆಲಸಗಳಲ್ಲಿ ತೊಡಗಿದವರಾಗಿದ್ದು, ತಾವೆಲ್ಲಾ ಒಂದೇ ಎಂಬ ವಿಶಾಲ ಭಾವನೆ ಹೊಂದಿ ಸದೃಢ ಸಂಘಟನೆಗೆ ಮುಂದಾಗಬೇಕಿದೆ ಎಂದು ಚನ್ನಗಿರಿ ತಾಲ್ಲೂಕು ವಡ್ನಾಳ್ ಶ್ರೀ ವಿಶ್ವಕರ್ಮ ಮಹಾಸಂಸ್ಥಾನ ಸಾವಿತ್ರಿ ಪೀಠದ ಅಷ್ಟೋತ್ತರ ಶತಶ್ರೀ ಶಂಕರಾತ್ಮನಾಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳ ವಿಶ್ವಕರ್ಮ ಸಮಾಜದ ವತಿಯಿಂದ ವಿಶ್ವಕರ್ಮ ಸಮುದಾಯ ಭವನದಲ್ಲಿ ಇಂದು ಆಯೋಜಿಸಿದ್ದ ವಿಶ್ವಕರ್ಮ ಮಹಾಸಂಸ್ಥಾನ ಶ್ರೀಗಳವರ 6 ನೇ ವರ್ಷದ ಚಾತುರ್ಮಾಸ ಸಿಮೋಲ್ಲಂಘನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿಶ್ವಕರ್ಮ ಜಯಂತಿಯನ್ನು ಆರಂಭದಲ್ಲಿ ಸರ್ಕಾರಿ ಕಚೇರಿ, ಸ್ಥಳೀಯ ಸಂಸ್ಥೆಗಳು, ಇದೀಗ ಶಾಲಾ-ಕಾಲೇಜುಗಳಲ್ಲಿ ಆಚರಿಸಲು ವಿಸ್ತರಿಸಿದೆ. ಶಾಲೆಯಲ್ಲಿ ವಿಶ್ವಕರ್ಮ ಗುರುವಿನ ಭಾವಚಿತ್ರ ಇಲ್ಲವಾದಲ್ಲಿ ಅಲ್ಲಿನ ಸಮಾಜದವರೇ ಒಂದು ಫೋಟೋ ಕೊಡುವಂತೆ ಸಲಹೆ ನೀಡಿ, ಆದಿ-ಅಂತ್ಯ ಹಾಗೂ ಹುಟ್ಟು ಸಾವಿಲ್ಲದ ವಿಶ್ವಕರ್ಮ ಗುರುಗಳು ಯಜ್ಞದಲ್ಲಿ ಅವಿರ್ಭವಿಸಿದವರಾಗಿದ್ದು, ಜಯಂತಿ ಆಚರಣೆ ಬಗ್ಗೆ ಚರ್ಚೆ ಹಾಗೂ ಜಿಜ್ಞಾಸೆಯಲ್ಲಿದ್ದು ಸೂಕ್ತ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಠದ ಹಿರಿಯ ಶ್ರೀಗಳಾದ ಶ್ರೀ ಚಂದ್ರಶೇಖರ ಸ್ವಾಮೀಜಿ ಶ್ರೀಮಠದಿಂದ ವಿಶ್ವಕರ್ಮ ಸಮಾಜಕ್ಕೆ ಸಮುದಾಯ ಭವನದ ನಿವೇಶನ ವನ್ನು ನೀಡಿದ್ದು, ಸಮಾಜವು ಇದನ್ನು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಂಡಿದೆ. ಅದರಂತೆ ವಿಶ್ವಕರ್ಮ ಸ್ವಾಮೀಜಿಗಳು ಚಾತುರ್ಮಾಸದ ಸಿಮೋಲ್ಲಂಘನ ಮುಕ್ತಾಯದ ಶ್ರೇಷ್ಠ ಹಾಗೂ ಶಕ್ತಿಯುತವಾದ ಸಮಯದ ದಿನವನ್ನು ಹೊನ್ನಾಳಿಗೆ ಕೊಟ್ಟಿದ್ದಾರೆ. ಇದರ ಸಾಫಲ್ಯ ಹಾಗೂ ಸಾರ್ಥಕತೆ ಸಮಾಜದ ಬಂಧುಗಳು ಪಡೆಯುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಡಿ.ಜಿ. ಶಾಂತನಗೌಡ, ಸಮುದಾಯ ಭವನಕ್ಕೆ ಅವಕಾಶವಿದ್ದಲ್ಲಿ ಹೆಚ್ಚಿನ ಹಣವನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಡುವುದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ರಾಜಕಾರಣಿಗಳಿಗೆ ಖುರ್ಚಿ ಹಾಗೂ ಸ್ಥಾನಮಾನ ಶಾಶ್ವತವಲ್ಲದಿದ್ದರೂ, ಗುರುಗಳು ಹಾಗೂ ಪೀಠಕ್ಕೆ ಸ್ಥಾನಮಾನಗಳು ಶಾಶ್ವತ ಎಂದು ರಾಜಕಾರಣಿಗಳು ಹಾಗೂ ನಾಡಿನ ಸ್ವಾಮೀಜಿಗಳ ಬಗ್ಗೆ ಇರುವ ಸಾರ್ವಜನಿಕರ ಅಭಿಪ್ರಾಯವನ್ನು ಮಾರ್ಮಿಕವಾಗಿ ಹಂಚಿಕೊಂಡರು.

ವಿಶ್ವಕರ್ಮ ಗುರುಗಳ ಬಗ್ಗೆ ಶಿವಮೊಗ್ಗದ ಭಾಗ್ಯಲಕ್ಷ್ಮಿ ಅವರು ವಿಶೇಷ ಉಪನ್ಯಾಸ ನೀಡಿದರು. ಎ. ಪಾಲಾಕ್ಷಚಾರ್ ಅಧ್ಯಕ್ಷತೆ ವಹಿಸಿದ್ದರು.

ವಡ್ನಾಳ್ ಮಠದ ಕಾರ್ಯಕಾರಿ ಸಮಿತಿ ಅಧ್ಯಕ್ಷ ಟಿ. ಮಹೇಂದ್ರಚಾರ್, ಶಿವಮೊಗ್ಗದ ವಿಶ್ವ ಬ್ರಾಹ್ಮಣದ ಜಿಲ್ಲಾ ಖಜಾಂಚಿ ಕೆ.ಬಿ. ಮಂಜಪ್ಪಚಾರ್, ಉದ್ಯಮಿ ಜೆ.ಎಲ್. ವಿಶ್ವೇಶ್ವಾಚಾರ್, ದಾವಣಗೆರೆ ಎ.ಜಿ. ರವಿ ಮಾತನಾಡಿದರು.

ಸಮಾಜದ ಸಹ ಕಾರ್ಯದರ್ಶಿ ಬೆನಕಪ್ಪಾಚಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ. ರುದ್ರಪ್ಪ ಸ್ವಾಗತಿಸಿದರು ಶಾರದ ಕಾರ್ಯಕ್ರಮ ನಿರೂಪಿಸಿದರು.

## ಅಥರ್ವನ ಆರೋಗ್ಯ ವಿಚಾರಿಸಿದ ಪ್ರಭಾ



ದಾವಣಗೆರೆ, ಸೆ. 29 - ದೇವರ ಬೆಳಕೆರೆ ಪಿಕಪ್ ಡ್ಯಾಮ್ ನಲ್ಲಿ ನಿನ್ನೆ ನಡೆದ ದುರ್ಘಟನೆಯಲ್ಲಿ ಬದುಕುಳಿದು ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 13 ವರ್ಷದ ಅಥರ್ವ ನನ್ನು ಎಸ್.ಎಸ್. ಕೇರ್ ಟ್ರಸ್ಟ್ ಅಧ್ಯಕ್ಷರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಭೇಟಿಯಾಗಿ ಚಿಕಿತ್ಸೆ ಹಾಗೂ ಆರೋಗ್ಯದ ಮಾಹಿತಿ ಪಡೆದರು.

ಬಾಲಕನಿಗೆ ಆತನ ತಂದೆ ಹಾಗೂ ಸಹೋದರನ ಅಂತ್ಯ ಸಂಸ್ಕಾರಕ್ಕೆ ತೆರಳಲು ಸೂಕ್ತ ವೈದ್ಯಕೀಯ ವ್ಯವಸ್ಥೆಯೊಂದಿಗೆ ಕಳಿಸಿಕೊಡುವ ವ್ಯವಸ್ಥೆಯನ್ನು ಪ್ರಭಾ ಅವರು ತಕ್ಷಣ ಮಾಡಿದರು.

## ಆಂಜನೇಯ ಬಡಾವಣೆಯಲ್ಲಿ 3ರಂದು ಮಹಿಳಾ ಆರೋಗ್ಯ ತಪಾಸಣೆ ಶಿಬಿರ

ದಾವಣಗೆರೆ, ಸೆ.27- ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಎಸ್.ಎಸ್. ಹೆಲ್ತ್ ಕೇರ್ ಸಹಯೋಗದಲ್ಲಿ ಬರುವ ಅಕ್ಟೋಬರ್ 3 ರ ಮಂಗಳವಾರ ಮಹಿಳಾ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸ್ತನ ಮತ್ತು ಗರ್ಭ ಕಂಠದ ಉಚಿತ ತಪಾಸಣೆ ನಡೆಯಲಿದೆ. ಅಂದು ಬೆಳಿಗ್ಗೆ 9 ಗಂಟೆಯಿಂದ ಆಂಜನೇಯ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ಯೋಗ ಹಾಲ್ ಮತ್ತು ಲೈಬ್ರರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳುವುದು. ಪರೀಕ್ಷೆ ಮಾಡಿಸಿಕೊಳ್ಳುವ ಒಂದು ಗಂಟೆ ಮುಂಚಿತವಾಗಿ ಕಾಫಿ, ಟೀ, ತಿಂಡಿ ಏನನ್ನೂ ಸೇವಿಸಬಾರದು.

ಮಧ್ಯಾಹ್ನ12.30ಕ್ಕೆ 'ಆರೋಗ್ಯ ಜಾಗೃತಿ' ವೇದಿಕೆ ಕಾರ್ಯಕ್ರಮವಿರುವುದು.

ಎಸ್.ಎಸ್. ಕೇರ್ ಟ್ರಸ್ಟ್‌ನ ಆರೋಗ್ಯ ಸೇವೆಗಳನ್ನು ಮಹಿಳೆಯರು ಉಚಿತವಾಗಿ ಪಡೆಯಬಹುದಾಗಿದೆ. ನಮ್ಮ ನಡೆ ಆರೋಗ್ಯದ ಕಡೆ ಆಗಲಿ ಎಂದು ಸಮಿತಿಯ ಅಧ್ಯಕ್ಷರಾದ ಕುಸುಮ ಲೋಕೇಶ್ ವಿನಂತಿಸಿದ್ದಾರೆ.

ವಿವರಗಳಿಗೆ ಕುಸುಮ ಲೋಕೇಶ್ ಮೊ. 7022002518, ವಸಂತ ಕೆ.ಆರ್. ಮೊ. 8660262270 ಅವರುಗಳನ್ನು ಸಂಪರ್ಕಿಸುವುದು.

## ಅಕ್ಕಮಹಾದೇವಿ ಮಹಿಳಾ ಸಮಾಜದಲ್ಲಿ ಇಂದು ಚಿಂತನ-ಮಂಥನ ಕಾರ್ಯಕ್ರಮ

ಅಕ್ಕಮಹಾದೇವಿ ಮಹಿಳಾ ಸಮಾಜದ ವತಿಯಿಂದ ಹುಣ್ಣಿಮೆ ಕಾರ್ಯಕ್ರಮದಡಿಯಲ್ಲಿ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5.30ಕ್ಕೆ ಚಿಂತನ-ಮಂಥನ ಕಾರ್ಯಕ್ರಮ ನಡೆಯಲಿದೆ.

ಅಕ್ಕಮಹಾದೇವಿ ಮಹಿಳಾ ಸಮಾಜದ ಅಧ್ಯಕ್ಷರಾದ ಸುಶೀಲಮ್ಮ ಕಂಚಿಕೆರೆ ಅಧ್ಯಕ್ಷತೆ ವಹಿಸುವರು. ಅನಂತನ ಹುಣ್ಣಿಮೆ, ಗೌರಿ - ಗಣೇಶ, ಶಿಕ್ಷಕರ ದಿನಾಚರಣೆ, ಭಾರತದ ಸಂವಿಧಾನದ ವಿಶೇಷತೆ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಒಂದು ನೆನಪು ಕುರಿತು ನಡೆಯುವ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಶೋಭಾ ಕಣವು, ಜಯದೇವಮ್ಮ ಪಂಡಿತ್, ಆಶಾ ಚಿತ್ರಕಿ, ಶ್ರೀದೇವಿ ಬ್ಯಾಡಗಿ ಅವರುಗಳು ಮಾತನಾಡಲಿದ್ದಾರೆ ಎಂದು ಜಯಮ್ಮ ನೀಲಗುಂದ ತಿಳಿಸಿದ್ದಾರೆ.

## ಸಿ.ಜಿ. ಆಸ್ಪತ್ರೆಯಲ್ಲಿ ಕನ್ನಡಕ ವಿತರಣೆ

ದಾವಣಗೆರೆ, ಸೆ.29- ಸಣ್ಣ ಅಕ್ಷರ ಓದಲು ಬರೆಯಲು ಸಾಧ್ಯವಾಗದವರು, ಕಾಳುಗಳನ್ನು ಹಸನು ಮಾಡಲು ತೊಂದರೆ ಇರುವವರು, ಸೂಜಿಗೆ ದಾರ ಪೋಣಿಸಲಿಕ್ಕೆ ಆಗದೇ ಇರುವ, ಸಮೀಪ ದೃಷ್ಟಿಗೆ ಸಂಬಂಧಿಸಿದಂತೆ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಕನ್ನಡಕಗಳನ್ನು ಬರುವ ಅಕ್ಟೋಬರ್ 1ರಂದು ಬೆಳಿಗ್ಗೆ 9ರಿಂದ 1 ಗಂಟೆವರೆಗೆ ಉಚಿತವಾಗಿ ವಿತರಿಸಲಾಗುವುದು

ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ರೂ.ನಂ. 126 ರಲ್ಲಿ ವಿತರಿಸಲಾಗುವ ಕನ್ನಡ ಪಡೆಯಲಿಚ್ಛಿಸುವ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನ ಪ್ರತಿ ಮತ್ತು ಕನ್ನಡಕದ ನಂಬರ್ ಇರುವ ಚೀಟಿಯನ್ನು ಕಡ್ಡಾಯವಾಗಿ ತರಬೇಕು ಎಂದು ಆಸ್ಪತ್ರೆ ನಿವಾಸಿ ವೈದ್ಯಾಧಿಕಾರಿ ತಿಳಿಸಿದ್ದಾರೆ. ಹೆಚ್ಚಿನ ವಿವರಕ್ಕೆ: 9980969791 ಸಂಪರ್ಕಿಸಿ.

## 2ರಂದು ಹಿರಿಯ ನಾಗರಿಕರ ದಿನಾಚರಣೆ

ದಾವಣಗೆರೆ, ಸೆ. 29- ವಿನೂತನ ಮಹಿಳಾ ಸಮಾಜದ ವತಿಯಿಂದ ಅಕ್ಟೋಬರ್ 2ರಂದು ಹಿರಿಯ ನಾಗರಿಕರ ದಿನಾಚರಣೆ ಆಚರಿಸಲಾಗುವುದು ಎಂದು ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

ನಗರ ಹಾಗೂ ಸುತ್ತಮುತ್ತಲಿನ 60 ವರ್ಷ ಮೇಲ್ಪಟ್ಟ ಪುರುಷರು ಹಾಗೂ ಮಹಿಳೆಯರಿಗೆ ಆಟಗಳನ್ನು ಆಡಿಸಲಾಗುವುದು. ಶ್ರೀಮತಿ ಡಾ. ಶಾಂತಾ ಭಟ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಮಾಹಿತಿಗಾಗಿ ಹೇಮಾ ಜಿ. ಶೇಟ್ (87623 91940), ಪುಷ್ಪಾ ಬಸವರಾಜ್ (9481670455) ಇವರನ್ನು ಸಂಪರ್ಕಿಸಬಹುದಾಗಿದೆ.

### ಓದುಗರ ಪತ್ರ

## ಕುಡುಕರ ಸಂಖ್ಯೆ ಹೆಚ್ಚಿಸುವುದು ಆರನೇ ಗ್ಯಾರಂಟಿಯಾಗದಿರಲಿ

**ಮಾನ್ಯರೇ,**

ಹೊಸ ಮದ್ಯದ ಅಂಗಡಿಗಳನ್ನು ತೆರೆಯಲು ರಾಜ್ಯ ಸರ್ಕಾರ ಎಲ್ಲಾ ರೀತಿಯಿಂದಲೂ ಉತ್ಸುಕವಾಗಿರುವುದು ನಿಜಕ್ಕೂ ದುರಂತ. ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಲ್ಲಿ ಇಂದಿಗೂ ಕೂಡ ಮದ್ಯ ವ್ಯಸನಿಗಳು ಹೆಚ್ಚಾಗಿ, ಕುಟುಂಬವನ್ನು ನಿರ್ವಹಿಸಲಾರದಷ್ಟು ದುಸ್ಥಿತಿಗೆ ತಲುಪಿ, ಹೆಣ್ಣು ಮಕ್ಕಳಂತೂ ರೋಸಿ ಹೋಗಿದ್ದಾರೆ. ಕೆಲವರು ಚಿಕ್ಕ ವಯಸ್ಸಿಗೆ ಗಂಡನನ್ನೇ ಕಳೆದುಕೊಂಡಿದ್ದಾರೆ. ಪಂಚಾಯಿತಿಗೊಂದು ಮದ್ಯದಂಗಡಿ ಪ್ರಾರಂಭಿಸಿದರೆ ಕುಡುಕರ ಸಂಖ್ಯೆ ಹೆಚ್ಚಾಗುತ್ತದೆ, ಹದಿ ಹರೆಯದವರೂ ಕೂಡ.

ಇದರ ವ್ಯಸನಿಗಳಾಗಿ ಜೀವನ ಹಾಳು ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಅನುಮಾನವಿದ್ದರೆ ಮಾನ್ಯ ಮಂತ್ರಿ, ಮಹೋದಯರುಗಳು ಸಮೀಕ್ಷೆ ನಡೆಸಲಿ. ಮಹಿಳಾ ಸಬಲೀಕರಣಕ್ಕಾಗಿ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಇನ್ನೊಂದೆಡೆ ಅದೇ ಹಣವನ್ನು ಹಿಂಬಾಗಿಲ ಮೂಲಕ ಕಸಿಯುವ ಕೆಲಸಕ್ಕೆ ಕೈ ಹಾಕಿದರೆ ಈ ಯೋಜನೆಗಳು ಸಾರ್ಥಕವಾಗುವುದಾದರೂ ಹೇಗೆ?

ಉಚಿತ ಯೋಜನೆಗಳ ಸಂಪನ್ಮೂಲ ಕ್ರೋಢೀಕರಣದ ಪರಿಣಾಮವಾಗಿ ಈಗಾಗಲೇ ಎಲ್ಲಾ ಬೆಲೆಗಳು ಗಗನಕ್ಕೇರಿವೆ ಮತ್ತು ಇದರ ಮತ್ತೊಂದು ಭಾಗವೇ ಹೊಸ ಮದ್ಯದಂಗಡಿಗಳ ಪ್ರಸ್ತಾವನೆ. ಈಗಾಗಲೇ ರಾಜ್ಯದಲ್ಲಿ ಭೀಕರ ಬರಗಾಲ ತಾಂಡವವಾಡುತ್ತಿದೆ. ಮಳೆ ಇಲ್ಲದೆ ಬೆಳೆಗಳು ಕೈಕೊಟ್ಟು ರೈತರ ಬದುಕು ಇನ್ನಷ್ಟು ಶೋಚನೀಯವಾಗುತ್ತಿದೆ. ರಾಜ್ಯದಲ್ಲಿ ಆಗಬೇಕಾಗುವಂತಹ ಅಭಿವೃದ್ಧಿ ಕೆಲಸಗಳು ಬಹಳಷ್ಟಿವೆ. ಅದನ್ನು ಬಿಟ್ಟು ಇಂತಹ ಮನೆ ಹಾಳು ಮಾಡುವಂತಹ ಯೋಜನೆಗಳಿಗೆ ಸರ್ಕಾರ ಕೈ ಹಾಕುವುದು ಬೇಡ. ಆದಾಗ್ಯೂ ಹಠಕ್ಕೆ ಬಿದ್ದು ಕೈ ಹಾಕಿದರೆ ಮುಂದೆ ಲೋಕಸಭಾ ಚುನಾವಣೆಯಲ್ಲಿ ಬರುವ ಮತಗಳು ಕೂಡ ಬರುವುದಿಲ್ಲ. ಇಷ್ಟು ದಿನ ಹೊರಡಿಸಿದಂತಹ ಜನಪ್ರಿಯ ಯೋಜನೆಗಳ ಹೆಸರು ಮಣ್ಣು ಪಾಲಾಗಿ, ಸರ್ಕಾರಕ್ಕೆ ಹೆಸರು ಬರುವುದಂತೂ ನಿಜ. ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕಾಗಿದೆ

**- ಮುರುಗೇಶ ಡಿ., ದಾವಣಗೆರೆ.**

## ಮಾಗನೂರು ಬಸಪ್ಪ ಕಾಲೇಜು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ



ದಾವಣಗೆರೆ, ಸೆ. 29- ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ, ವಿವಿಧಕ್ರೀಡೆಗಳಲ್ಲಿಜಯಶೀಲರಾಗುವುದರೊಂದಿಗೆ ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುತ್ತಾರೆ.

ಬಾಲಕರ ಟೆನ್ನಿಕಾಯ್ಟ್ ತಂಡದ ಸಾಯಿರಾಜ್ ಉಮೇಶ್ ಎರಕಲ್, ಫರ್ಹಾನ್ ಖಾನ್, ವಿಕಾಸ್ ಆರ್.ಎನ್, ಮನ್ವಿತ್ ಆರ್.ಆರ್, ಶ್ರೇಯಸ್ ಹೆಚ್ ಯರೇಶೀಮಿ, ಇವರ ತಂಡ ಟೆನ್ನಿಕಾಯ್ಟ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಕರಾಟೆಯಲ್ಲಿ 45 ಕೆ.ಜಿ ವಿಭಾಗದಿಂದ ಕು. ಶ್ರೇಯ ಪಿ, 50 ಕೆ.ಜಿ ವಿಭಾಗದಿಂದ ಕು.ಅಭಿಲಾಷ ಕೆ ನಾಯಕ್, 70ಕೆ.ಜಿ ವಿಭಾಗದಿಂದ ಕು.ಕವನ ಜಿ.ಜೆ ಮತ್ತು 58 ಕೆ.ಜಿ ವಿಭಾಗದಿಂದ ಸೋಮ ಶೇಖರ್ ಎಂ.ಯು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ತಾಲ್ಲೂಕು ಮಟ್ಟದ ವೈಯಕ್ತಿಕ ಆಟಗಳಲ್ಲಿ ಬಾಲಕಿಯರ ವಿಭಾಗದಿಂದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಕು.ವಿದ್ಯಾ ಎಂ.ಆರ್ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಗುಂಡು ಎಸೆತ ಸ್ಪರ್ಧೆಯಲ್ಲಿ ಕು.ಕವನ ಜಿ.ಜೆ ತೃತೀಯ ಸ್ಥಾನ ಪಡೆದಿರುತ್ತಾರೆ.

ವಿಜೇತ ವಿದ್ಯಾರ್ಥಿಗಳನ್ನು ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಎಂ.ಬಿ.ಸಂಗಮೇಶ್ವರಗೌಡರು, ಕಾಲೇಜಿನ ನಿರ್ದೇಶಕರಾದ ಡಾ.ಜಿ.ಎನ್.ಹೆಚ್ ಕುಮಾರ್, ಪ್ರಾಚಾರ್ಯ ಡಾ. ಪ್ರಸಾದ್ ಬಂಗೇರಾ ಎಸ್., ಕ್ರೀಡಾ ಸಮಿತಿಯ ಉಪನ್ಯಾಸಕರಾದ ಚಂದನ್ ಬಿ, ಶಿವಪ್ರಸಾದ್ ಟಿ.ಎಸ್., ಪ್ರಹ್ಲಾದ್ ಎಂ.ಆರ್., ಸಂಪತ್ ಕುಮಾರ್ ಸಿ.ಎಂ., ಬಸವ ರಾಜ್ ಕುರುವತ್ತೇರ್, ಕು. ಬಿಂದು ಕೆ.ಆರ್., ಕು.ಕಾವ್ಯ ಕೊಪ್ಪದ್, ಶ್ರೀಮತಿ ಶ್ವೇತ ಕೆ.ಎಸ್. ಅಭಿನಂದಿಸಿರುತ್ತಾರೆ.

## ಜ್ಯುವೆಲರಿ ಕಳ್ಳತನ ಪ್ರಕರಣ ಪತ್ತೆ : 48 ಕೆಜಿ ಬೆಳ್ಳಿ ಗಟ್ಟಿ ವಶ

ದಾವಣಗೆರೆ, ಸೆ.29- ನಗರದ ವಿಜಯಲಕ್ಷ್ಮಿ ರಸ್ತೆಯಲ್ಲಿನ ಕೆ.ಟಿ. ಪವನ್ ಜ್ಯೂವೆಲರ್ಸ್‌ನಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನು ಪತ್ತೆ ಹಚ್ಚಿರುವ ಪೊಲೀಸರು ಮಹರಾಷ್ಟ್ರದ ಸೊಲ್ಲಾಪುರ ಮೂಲದ ಜೀಬನ್ ಸಿಂಗ್ (55) ಎಂಬಾತ ನನ್ನು ಬಂಧಿಸಿ, ಆತನಿಂದ 18 ಲಕ್ಷ ರೂ. ಮೌಲ್ಯದ 48 ಕೆಜಿ ಬೆಳ್ಳಿ ಗಟ್ಟಿಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿ ಯನ್ನು ಹೆಚ್ಚಿನ ತನಿಖೆಗೆ ಒಳಪಡಿಸಿದಾಗ ಕಳ್ಳತನ ಮಾಡಿದ್ದ ಬೆಳ್ಳಿಯ ಸಾಮಾನುಗಳನ್ನು ರಾಣೇಬೆನ್ನೂರಿನ ಎಂ.ಜಿ. ರಸ್ತೆಯಲ್ಲಿರುವ ಬೆಳ್ಳಿ-ಬಂಗಾರದ ಅಂಗಡಿ ಮಾಲೀಕನಿಗೆ ಮಾರಾಟ ಮಾರಿದ್ದುದು ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಪತ್ತೆಗೆ ಶ್ರಮಿಸಿದ ಪಿಎಸ್‌ಐಗಳಾದ ಜಿ.ನಾಗರಾಜ್, ಮಂಜುನಾಥ ಕಲ್ಲೇ ದೇವರು, ಸಿಬ್ಬಂದಿಗಳಾದ ಫಕೃದ್ದೀನ್ ಅಲಿ, ವಿಶಾಲಾಕ್ಷಿ, ಪೂರ್ವಾಚಾರಿ, ಹರೀಶ್, ಸುರೇಶ್ ಟಿ., ಅಮರೇಶ್ ಸಂಗಮ್, ರಾಘವೇಂದ್ರ, ರಾಮಚಂದ್ರ ಜಾಧವ್ ಅವರನ್ನು ಎಸ್ಪಿ ಉಮಾ ಪ್ರಶಾಂತ್, ಎಎಸ್ಪಿ ಆರ್.ಬಿ ಬಸರಗಿ ಶ್ಲಾಘಿಸಿದ್ದಾರೆ.

## ಸಿದ್ಧಗಂಗಾ ಶಾಲೆಯ ಕ್ರೀಡಾಪಟುಗಳ ಸಾಧನೆ





ದಾವಣಗೆರೆ, ಆ. 29- ದಾವಣಗೆರೆ ದಕ್ಷಿಣ ವಲಯದ ಪ್ರೌಢಶಾಲಾ ಮಕ್ಕಳ ಕ್ರೀಡಾಕೂಟದಲ್ಲಿ ನಗರದ ಸಿದ್ಧಗಂಗಾ ಶಾಲೆಯ ಬಾಲಕ-ಬಾಲಕಿಯರು ಗುಂಪು ಆಟ ಮತ್ತು ಮೇಲಾಟಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಬಾಲಕಿಯರಲ್ಲಿ ಚೈತ್ರ ಎಂ.ಎನ್. 3000 ಮೀ. ಮತ್ತು 1500 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದರೆ ಜೀವಿತ ಜಿ. 1500 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾಳೆ.

ಬಾಲಕರ ವಿಭಾಗದಲ್ಲಿ ರಂಗನಾಥ ಆರ್. 3000 ಮೀ ಮತ್ತು 1500 ಮೀ. ಓಟದಲ್ಲಿ ಪ್ರಥಮ ಸ್ಥಾನ, ಪೃಥ್ವಿ ಕೆ.ಎಂ. 200 ಮೀ. ಮತ್ತು 100 ಮೀ. ಓಟದಲ್ಲಿ ಪ್ರಥಮ, ತರುಣ್ ವಿ. 500 ಮೀ. ವೇಗದ ನಡಿಗೆಯಲ್ಲಿ ಪ್ರಥಮ, ಸರ್ವಜಿತ್ ಹೆಚ್. ಎಂ. ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಬಾಲಕಿಯರಲ್ಲಿ ಹೆಚ್.ಬಿ. ಕವಿತ ನಾಯಕತ್ವದಲ್ಲಿ ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದರೆ, ಖೋ-ಖೋ ತಂಡದ ನಾಯಕ ಯಶ್ವಂತ್ ಎಸ್. ನಾಯಕತ್ವದಲ್ಲಿ ಬಾಲಕರು ಖೋ-ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿಜೇತರಾದ ಮಕ್ಕಳನ್ನು ಮತ್ತು ದೈಹಿಕ ಶಿಕ್ಷಕರಾದ ರಘು ಹೆಚ್.ಎಂ. ಶ್ರೀನಿವಾಸ ಎನ್.ಎಲ್. ಸುನೀತ ಬಾಯಿ, ದುಗ್ಗಪ್ಪ ಡಿ. ಮತ್ತು ಆರೋಗ್ಯಮ್ಮ ಇವರನ್ನು ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್, ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜ ಮತ್ತು ಮುಖ್ಯೋಪಾಧ್ಯಾಯಿನಿ ರೇಖಾರಾಣಿ ಕೆ.ಎಸ್. ಅವರು ಅಭಿನಂದಿಸಿದ್ದಾರೆ.

## ಅಮೃತ ವಿದ್ಯಾಲಯಂನಲ್ಲಿಂದು ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ

ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹ ವತಿಯಿಂದ ಮಾತಾ ಅಮೃತಾನಂದಮಯಿ ಅವರ 70ನೇ ಜನ್ಮ ದಿನಾಚರಣೆ ಹಾಗೂ ಅಕ್ಟೋಬರ್ 1ರ ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರವನ್ನು ನಗರದ ಅಮೃತ ವಿದ್ಯಾಲಯಂನಲ್ಲಿ ಇಂದು ಬೆಳಿಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ್ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜನತಾವಾಣಿ ದಿನಪತ್ರಿಕೆ ಉಪ ಸಂಪಾದಕ ಇ.ಎಂ. ಮಂಜುನಾಥ್, ಮೂಗು, ಗಂಟಲು ತಜ್ಞ ಡಾ. ಎ.ಎಂ. ಶಿವಕುಮಾರ್, ಪ್ರಾಂಶುಪಾಲರಾದ ಶ್ರೀಮತಿ ಎನ್. ಪ್ರತಿಭಾ ಉಪಸ್ಥಿತರಿರುವರು.

## ನಾಳೆ ರಾಜ್ಯ ಸರ್ಕಾರಿ ನೌಕರರ ವಿಶೇಷ ಸಭೆ

ದಾವಣಗೆರೆ, ಸೆ. 29- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2022 ರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿ ಅವರ ಅಧ್ಯಕ್ಷತೆಯಲ್ಲಿ ವರ್ಚ್ಯುವಲ್ ವಿಧಾನದ ಮೂಲಕ ಸರ್ವ ಸದಸ್ಯರ ವಿಶೇಷ ಮಹಾಸಭೆಯನ್ನು ಆಯೋಜಿಸಲಾಗಿದೆ.

ಅಕ್ಟೋಬರ್ 1 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿ ರಸ್ತೆಯಲ್ಲಿರುವ ಮಹಾವೀರ ಸಮುದಾಯ ಭವನದಲ್ಲಿ ಈ ಸಭೆ ಏರ್ಪಾಡಾಗಿದೆ ಎಂದು ಸರ್ಕಾರಿ ನೌಕರರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ತಿಳಿಸಿದ್ದಾರೆ.

## ನಗರದಲ್ಲಿಂದು ಗುರುಚೇತನ, ಗುರು ಶೇಷ್ಠ ಪ್ರಶಸ್ತಿ ಪ್ರದಾನ

ಶಿಕ್ಷಣ ತಜ್ಞ ಡಾ.ಹೆಚ್.ವಿ. ವಾಮದೇವಪ್ಪ ಚಾರಿಟಬಲ್ ಮತ್ತು ಎಜುಕೇಶನಲ್ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಮಾಗನೂರು ಬಸಪ್ಪ ಸಭಾ ಭವನದಲ್ಲಿ ನಡೆಯುವ ಸಮಾರಂಭದಲ್ಲಿ 'ಗುರುಚೇತನ, ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಅಧ್ಯಕ್ಷ ಡಾ. ಹುಲಿಕಲ್ ನಟರಾಜ್ ಅತಿಥಿಯಾಗಿ ಭಾಗವಹಿಸುವರು.ಟ್ರಸ್ಟ್ ಅಧ್ಯಕ್ಷ ಪ್ರೊ. ಹೆಚ್. ಎಸ್. ಶಾಂತವೀರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಎನ್‌ಸಿಇಆರ್‌ಟಿ)ಯಲ್ಲಿ ಸಹಾಯಕ ಪ್ರಾಧ್ಯಾಪಕ ಡಾ.ಟಿ.ವಿ. ಸೋಮಶೇಖರ್ ಅವರಿಗೆ 'ಗುರುಚೇತನ' ಹಾಗೂ ಜಗಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿಜ್ಞಾನ ಶಿಕ್ಷಕ ಮಂಜುನಾಥ್ ಸಾಹುಕಾರ್ ಅವರಿಗೆ 'ಗುರುಶ್ರೇಷ್ಠ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

## ಕೊಟ್ಟೂರೇಶ್ವರ ದೇವಸ್ಥಾನದ ಹುಂಡಿ ಎಣಿಕೆಯಲ್ಲಿ 61 ಲಕ್ಷ ರೂ.ಗಳು



ಕೊಟ್ಟೂರು, ಸೆ. 29 - ಪಟ್ಟಣದ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದ ಹುಂಡಿ ಎಣಿಕೆ ಶುಕ್ರವಾರ ನಡೆಯಿತು. ಹುಂಡಿಯಲ್ಲಿ ಒಟ್ಟು 61,13,886ರೂ. ಸಂಗ್ರಹವಾಗಿದೆ ಎಂದು ಸಹಾಯಕ ಆಯುಕ್ತರು ತಿಳಿಸಿದ್ದಾರೆ. ದೇವಸ್ಥಾನದ ಪ್ರಧಾನ ಧರ್ಮಕರ್ತ ಸಿ.ಎಚ್. ಎಂ.ಗಂಗಾಧರಯ್ಯ, ಮುಜರಾಯಿ ಇಲಾಖೆಯ ಸಹಾಯಕ ಆಯುಕ್ತರು, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ.ಬಿ.ಎಂ., ಕಟ್ಟಿಮನಿ ದೈವಸ್ಥರು, ಉಪಸ್ಥಿತರಿದ್ದರು.

## ನಗರದ ರಾಂ ಅಂಡ್ ಕೋ ಸರ್ಕಲ್‌ನಲ್ಲಿ ಗಣಪತಿ ಇಂದು ವಿಸರ್ಜನೆ

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಶ್ರೀ ವರಸಿದ್ಧಿ ವಿನಾಯಕ ವಿನಾಯಕ ದೇವಸ್ಥಾನದ ಮುಂದೆ ಪ್ರತಿಷ್ಠಾಪಿಸಿರುವ ಶ್ರೀ ಗಣೇಶ ಮೂರ್ತಿ ವಿಸರ್ಜನಾ ಕಾರ್ಯಕ್ರಮ ಇಂದು ನಡೆಯಲಿದೆ. ಮಧ್ಯಾಹ್ನ 1.30ಕ್ಕೆ ಮೆರವಣಿಗೆ ಏರ್ಪಾಡಾಗಿದ್ದು, ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಅವರು ಮೆರವಣಿಗೆಗೆ ಚಾಲನೆ ನೀಡುವರು.

## ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಮಠದಲ್ಲಿ ಇಂದು ದಾಸೋಹ



ದಾವಣಗೆರೆ ಸಮೀಪದ ಮಾಗಾನಹಳ್ಳಿ ಕೋಡಿಕ್ಯಾಂಪ್ ಬಳಿಯ ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಮಠದಲ್ಲಿ ಇಂದು ಬೆಳಿಗ್ಗೆ 6.30ಕ್ಕೆ ಶ್ರೀ ಗುರು ಕೊಟ್ಟೂರೇಶ್ವರಸ್ವಾಮಿ ಪಾದಗಳಿಗೆ ಅಭಿಷೇಕ, ಪೂಜೆ, ನಂತರ ಬೆಳಿಗ್ಗೆ 7 ಗಂಟೆಗೆ ದಾಸೋಹ ನಡೆಯಲಿದೆ.

ಸದನದ ಕಟ್ಟಡದ ಆರ್.ಸಿ.ಸಿ.ಯ ಸ್ಥಳ ಪೂಜೆ ಮತ್ತು ಕಾಂಕ್ರೀಟ್ ಮೆಷಿನ್‌ಗಳ ಪೂಜೆಯೊಂದಿಗೆ ಕಾಂಕ್ರೀಟ್ ಹಾಕುವ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಗೌಡ ಸಾರಸ್ವತ ಸಮಾಜದ ಸಭೆ

ಗೌಡ ಸಾರಸ್ವತ ಸಮಾಜದ ಸರ್ವ ಸದಸ್ಯರ ಮಹಾಸಭೆಯು ಇಂದು ಸಂಜೆ 6 ಗಂಟೆಗೆ ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಖಜಾಂಚಿ ಆರ್.ವಿ.ಶೆಣೈ ತಿಳಿಸಿದ್ದಾರೆ.

**WANTED**
**Sales Executives - 3 Nos,**
Education - Any Degree,
Exeperience - 2 Years in Sales Field,
Attractive Salary
Contact : **KABBUR FURNITURE**
P.B. Road, Beside Sulthan Diamonds & Gold
Davanagere. Contact : **89519 16300**
Contact Time : 12 pm to 6 pm



## ಇಂದು, ಶ್ರೀ ಮಟ್ಟಿ ಆಂಜನೇಯ ಸ್ವಾಮಿ ಪರವು

ದಾವಣಗೆರೆ ವಿದ್ಯಾನಗರದ **ಶ್ರೀ ಮಟ್ಟಿ ಆಂಜನೇಯ ಸ್ವಾಮಿ**ಗೆ ಪ್ರತಿ ವರ್ಷ ಭಾದ್ರಪದ ಮಾಸದಲ್ಲಿ ಅನಾದಿ ಕಾಲದಿಂದಲೂ ಪರವು ಆಚರಣೆ ಮಾಡಿಕೊಂಡು ಬಂದಿರುವ ಪ್ರಯುಕ್ತ, **ದಿನಾಂಕ 30.09.2023ರ ಶನಿವಾರ ಮಧ್ಯಾಹ್ನ 12.00 ಗಂಟೆಯಿಂದ ಶ್ರೀ ಸ್ವಾಮಿಯ ಪರವು ಆರಾಧನೆ** ನಡೆಯಲಿದೆ. ಸರ್ವ ಭಕ್ತಾದಿಗಳು ಆಗಮಿಸಿ, ಸ್ವಾಮಿಯ ಆಶೀರ್ವಾದ ಪಡೆದು, ಪ್ರಸಾದ ಸ್ವೀಕರಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಶ್ರೀ ಮಟ್ಟಿ ಆಂಜನೇಯ ಸ್ವಾಮಿ ಪರವು ಆಚರಣಾ ಸಮಿತಿ**
**ಶಾಮನೂರು, ವಿದ್ಯಾನಗರ, ದಾವಣಗೆರೆ.**

# ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ಅಧ್ಯಕ್ಷರಾಗಿ ಎಸ್. ಸುನಿಲ್



ದಾವಣಗೆರೆ, ಸೆ.29- ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾದ ರಾಜ್ಯಾಧ್ಯಕ್ಷರಾಗಿ ನಗರದ ಎಸ್.ಕೆ.ಪಿ. ರಸ್ತೆಯ ವಾಸವಿ ಯುವಜನ ಸಂಘದ ಅಧ್ಯಕ್ಷ ಎಸ್.ಸುನಿಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬರುವ ಅಕ್ಟೋಬರ್ 8 ರಂದು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 6 ವಿಭಾಗಗಳಲ್ಲಿ ಚುನಾವಣೆ ನಡೆಸಲು ನಿಗದಿಯಾಗಿತ್ತು. ನಾಮಪತ್ರ ಸಲ್ಲಿಸಲು ನಿನ್ನೆ ಕೊನೆ ದಿನವಾಗಿತ್ತು. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸುನಿಲ್ ಹೊರತುಪಡಿಸಿ, ಯಾರೂ ಸಹ ನಾಮಪತ್ರ ಸಲ್ಲಿಸದ ಕಾರಣ ಸುನಿಲ್ ಆಯ್ಕೆ ಅವಿರೋಧವಾಗಿ ನಡೆಯಿತು.

ಸುನಿಲ್, ದಾವಣಗೆರೆ ಲಯನ್ಸ್ ಕ್ಲಬ್‌ನ ಮಾಜಿ ಅಧ್ಯಕ್ಷ ವೈ.ಬಿ.ಸತೀಶ್ ಅವರ ಪುತ್ರ. ಸುನಿಲ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ವಾಸವಿ ಯುವಜನ ಸಂಘದ ಮಾಜಿ ಸಂಚಾಲಕ ಬಿ.ಎಸ್.ಶಿವಾನಂದ, ಗೌರವಾಧ್ಯಕ್ಷರಾದ ಬಿ.ಎನ್. ಸಾಯಿಪ್ರಸಾದ್, ಎನ್.ವಿ.ಬದರಿನಾಥ್, ನಿಕಟಪೂರ್ವ ಅಧ್ಯಕ್ಷ ಅಮರಾವತಿ ಡಿ. ರಾಘವೇಂದ್ರ, ಕಾರ್ಯದರ್ಶಿ ಆರ್.ಎನ್.ಅಜಿತ್, ಖಜಾಂಚಿ ಬಿ.ಎಸ್.ರಾಘವೇಂದ್ರ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಗೃಹರಕ್ಷಕ ದಳದ ಸಿಬ್ಬಂದಿಗೆ ಮುಖ್ಯಮಂತ್ರಿ ಚಿನ್ನದ ಪದಕ ಪ್ರದಾನ





ದಾವಣಗೆರೆ, ಸೆ. 29- ಬೆಂಗಳೂರಿನ ಆರ್.ಎ. ಮಡ್ಡೂರು ಅಗ್ನಿಶಾಮಕ ತರಬೇತಿ ಅಕಾಡೆಮಿಯಲ್ಲಿ ಮೊನ್ನೆ ನಡೆದ 2022 ನೇ ಸಾಲಿನ ಮುಖ್ಯಮಂತ್ರಿ ಚಿನ್ನದ ಪದಕ ಪ್ರದಾನ ಸಮಾರಂಭದಲ್ಲಿ ಜಿಲ್ಲಾ ಗೃಹರಕ್ಷಕ ದಳದ ಸ್ಟಾಫ್ ಆಫೀಸರ್ (ಪ್ರಚಾರ) ಮತ್ತು ನ್ಯಾಮತಿ ಘಟಕದ ಘಟಕಾಧಿಕಾರಿ, ಪ್ಲಟೂನ್ ಕಮಾಂಡರ್ ಎಂ. ರಾಘವೇಂದ್ರ ಅವರಿಗೆ ಪದಕ ಪ್ರದಾನ ಮಾಡಲಾಯಿತು. ಗೃಹ ಸಚಿವ ಡಾ.ಜಿ. ಪರಮೇಶ್ವರ್, ಜಿಲ್ಲಾ ಕಮಾಂಡೆಂಟ್ ಡಾ.ಎಸ್.ಹೆಚ್. ಸುಜಿತ್ ಕುಮಾರ್ ಮತ್ತು ಇತರರು ಉಪಸ್ಥಿತರಿದ್ದು ಅಭಿನಂದಿಸಿದರು.

# ನಗರದಲ್ಲಿ ಇಂದು- ನಾಳೆ ನೀರು ಇಲ್ಲ

ದಾವಣಗೆರೆ, ಸೆ. 29- ಮಹಾನಗರ ಪಾಲಿಕೆ ನೀರು ಸರಬರಾಜು ಕೇಂದ್ರ ದೊಡ್ಡಬಾತಿ ಶುದ್ಧೀಕರಣ ಕೇಂದ್ರಕ್ಕೆ ಬೆವಿಕಂ ಇಲಾಖೆಯಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ (ಎಲ್ ಸಿ) ಇರುವುದರಿಂದ ಹಾಗೂ ಹರಗನಹಳ್ಳಿ ಕ್ರಾಸ್ ಹತ್ತಿರ ಪೈಪ್ ಲೀಕೇಜ್ ರಿಪೇರಿ ಮತ್ತು ದಾವಣಗೆರೆ ಪಿಬಿ ರಸ್ತೆಯಲ್ಲಿರುವ ಬಿಎಸ್ಸೆನ್ನೆಲ್ ಹತ್ತಿರ ಕೆಯುಐಡಿ ಎಫ್‌ಸಿ (ಜಲಸಿರಿ) ಇಲಾಖೆಯ ಪೈಪ್ ಲಿಂಕಿಂಗ್ ಕಾರ್ಯ ಇರುವುದರಿಂದ ನಗರಕ್ಕೆ ನಾಳೆ ದಿನಾಂಕ 30ರ ಶನಿವಾರ ಮತ್ತು ಅ. 1 ರ ಭಾನುವಾರ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಎಂದು ಪಾಲಿಕೆ ಆಯುಕ್ತರಾದ ರೇಣುಕ ತಿಳಿಸಿದ್ದಾರೆ.

# ಸಿಜಿ ಆಸ್ಪತ್ರೆ ನೇತ್ರಾಧಿಕಾರಿ ರಂಗನಾಥ್ ಇಂದು ನಿವೃತ್ತಿ



ದಾವಣಗೆರೆ, ಸೆ. 29- ಜಿಲ್ಲಾ ಜಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ನೇತ್ರಾಧಿಕಾರಿ ಎಸ್.ಕೆ. ರಂಗನಾಥ್ ಅವರು ನಾಳೆ ದಿನಾಂಕ 30ರ ಶನಿವಾರ ತಮ್ಮ ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಲಿದ್ದಾರೆ.

ಮೂಲತಃ ಹಿರಿಯೂರು ತಾಲ್ಲೂಕಿನವರಾದ ರಂಗನಾಥ್ ಅವರು, ಹಿರಿಯೂರು ತಾಲ್ಲೂಕಿನ ದಿಂಡಾವರ, ದಾವಣಗೆರೆ ತಾಲ್ಲೂಕಿನ ಅಣಜಿ, ಹದಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಿಜಿ ಆಸ್ಪತ್ರೆ ಸೇರಿದಂತೆ, ಸುದೀರ್ಘ 39 ವರ್ಷಗಳ ಕಾಲ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದಾರೆ.

ರಂಗನಾಥ್ ಅವರ ಸೇವೆಗಾಗಿ ಕರ್ನಾಟಕ ಜ್ಯೋತಿ, ಭಾರತ ಸೇವಾ ರತ್ನ ಸೇರಿದಂತೆ ಅನೇಕ ಸಾಮಾಜಿಕ ಸಂಘಟನೆಗಳು ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿದೆ.

# ಕೆಟಿಜೆ ನಗರದ ಗಣೇಶ ವಿಸರ್ಜನೆ

ದಾವಣಗೆರೆಯ ಕೆಟಿಜೆ ನಗರ 2ನೇ ತಿರುವು, ಶಿವಪ್ಪಯ್ಯ ವೃತ್ತದ ಬಳಿ ಇರುವ ಶ್ರೀ ಗಜಾನನ ಯುವಕರ ಸಂಘ, ಶ್ರೀ ಮಹಾಗಣಪತಿ ಶ್ರೀ ಶನೈಶ್ಚರ, ಶ್ರೀ ದುರ್ಗಾದೇವಿ ದೇವಸ್ಥಾನ ಸಮಿತಿಯ ವತಿಯಿಂದ ನಡೆಯುತ್ತಿರುವ ಗಣೇಶ ಮಹೋತ್ಸವ ಕಾರ್ಯಕ್ರಮದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಹರಾಜು ಕಾರ್ಯಕ್ರಮ, ಸಂಜೆ 4 ಗಂಟೆಗೆ ಮೆರವಣಿಗೆ ಮುಖಾಂತರ ಗಣಪತಿ ವಿಸರ್ಜನೆ ನಡೆಯಲಿದೆ.

# ನಾಳೆ ಚೆನ್ನಾಗಿರಬೇಕಾದರೆ ಸಾಧನೆ ಮಟ್ಟ ಏರಿಸಿಕೊಳ್ಳಲೇಬೇಕು

## ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಕಾರ್ಯಕ್ರಮದಲ್ಲಿ ಇಸ್ರೋ ವಿಜ್ಞಾನಿ ಡಾ. ದಾರುಕೇಶ್ವರ



ದಾವಣಗೆರೆ,ಸೆ.29- ಭಾರತದ ವಿಜ್ಞಾನಿಗಳು ಏನನ್ನೂ ಸಾಧಿಸಬಲ್ಲರು ಎಂಬುದು ಚಂದ್ರಯಾನದ ಯಶಸ್ಸಿನಿಂದಾಗಿ ವಿಶ್ವಕ್ಕೆ ಅರಿವಾಗಿದೆ ಎಂದು ಇಸ್ರೋದ ವಿಜ್ಞಾನಿ ಡಾ. ದಾರುಕೇಶ್ವರ ಅವರು ಹೇಳಿದರು.

ನಗರದ ತ್ರಿಶೂಲ್ ಕಲಾ ಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ 51ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು, ಬ್ಯಾಂಕ್ ವತಿಯಿಂದ ನೀಡಿದ ಗೌರವಕ್ಕೆ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡಿದರು.

ಜಗತ್ತಿನ ಒಟ್ಟು ಜಿಡಿಪಿ ಯ ಶೇ. 78 ರಷ್ಟು ವಿಜ್ಞಾನ - ತಂತ್ರಜ್ಞಾನದ ಕ್ಷೇತ್ರದಿಂದಲೇ ಬರುತ್ತಿದೆ. ಇಂದಿಗಿಂತ ನಾಳೆ ಚೆನ್ನಾಗಿರಬೇಕೆಂದರೆ ನಮ್ಮ ಸಾಧನೆಯ ಮಟ್ಟ ಏರಿಸಿಕೊಳ್ಳಲೇಬೇಕು. ಚಂದ್ರಯಾನ ಮೂರರ ಪ್ರಕ್ರಿಯೆಯನ್ನು ವಿಶ್ವದ 80 ಲಕ್ಷ ಜನ ನೇರವಾಗಿ ವೀಕ್ಷಿಸಿದ್ದಾರೆ. ಇದು ಬ್ರೆಜಿಲ್‌ನ ವಿಶ್ವ ಫುಟ್ಬಾಲ್ ಪಂದ್ಯದ ವೀಕ್ಷಕರ ದಾಖಲೆ ಬಿಟ್ಟರೆ ಇದೇ ದೊಡ್ಡ ದಾಖಲೆ ಅನ್ನಬಹುದು.

ಸಾಂಘಿಕವಾಗಿ ಸಮಾಜದ ಕಲ್ಯಾಣಕ್ಕೆ ವಿಜ್ಞಾನ ಕ್ಷೇತ್ರ ಹಾಗೂ ಸಹಕಾರ ಕ್ಷೇತ್ರವೆರಡೂ ಕಾರಣವಾಗಿವೆ ಎಂದರಲ್ಲದೇ, ಚಂದ್ರಯಾನ ಮೂರರ ಅನೇಕ ರೋಚಕ ಹಾಗೂ ಸ್ವಾರಸ್ಯ ಕರ ಅಂಶಗಳನ್ನು ಮಾತಿನಲ್ಲಿ ಚಿತ್ರಿಸಿದರು.

ಇಡೀ ಮಹಾಸಭೆಯ ವಿಶೇಷ ಆಕರ್ಷಣೆಯಾಗಿದ್ದ ಇವರ ಭಾಷಣವನ್ನು ಆಸಕ್ತಿಯಿಂದ ಕೇಳಿದ ಸಭಾ ಸದರು, ಚಂದ್ರಯಾನದ ಹಾಗೂ ಇಸ್ರೋ ಸಾಧನೆಯ ಕುರಿತಾಗಿ ಅನೇಕ ಪ್ರಶ್ನೆಗಳನ್ನು ಕೇಳಿ ವಿಜ್ಞಾನಿ ಡಾ.ದಾರುಕೇಶರಿಂದ ಉತ್ತರಗಳನ್ನು ಪಡೆದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್, ಚಂದ್ರಯಾನ - 3 ಯಶಸ್ಸಿನಲ್ಲಿ ಶ್ರಮಿಸಿದ ಇಸ್ರೋ ವಿಜ್ಞಾನಿ ಡಾ. ದಾರುಕೇಶ್ವರ ಅವರೂ ಸೇರಿದಂತೆ ಎಲ್ಲಾ ವಿಜ್ಞಾನಿಗಳ ಸೇವೆಯನ್ನು ಮೆಲುಕು ಹಾಕಿ ಅಭಿನಂದಿಸಿದರು.

# ಗಾಂಧಿ ಜಯಂತಿ: ಅ.2 ರಂದು ಪ್ರಾಣಿ ವಧೆ, ಮಾಂಸ ಮಾರಾಟ ನಿಷೇಧ

ದಾವಣಗೆರೆ, ಸೆ. 29- ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಅ. 2 ರಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾಂಸ ಉದ್ದಿಮೆ ನಡೆಸುತ್ತಿರುವ ಉದ್ದಿಮೆದಾರರಿಗೆ ಮಾಂಸ ಮಾರಾಟ ಮಾಡದಂತೆ ಸೂಚನೆ ನೀಡಲಾಗಿದ್ದು, ತಪ್ಪಿದಲ್ಲಿ ಪಾಲಿಕೆ ಕಾಯ್ದೆ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆಯುಕ್ತರಾದ ರೇಣುಕ ಎಚ್ಚರಿಸಿದ್ದಾರೆ.










# ಚುನಾವಣೆಗಳಲ್ಲಿ ಐ.ಎನ್.ಡಿ.ಐ.ಎ. ಬಿಕ್ಕಟ್ಟಿಗೆ ತಡೆ

ಪುಣೆ, ಸೆ. 29 - ಮುಂಬರುವ ರಾಜಸ್ಥಾನ ಹಾಗೂ ಮಧ್ಯ ಪ್ರದೇಶ ಮುಂತಾದ ವಿಧಾನಸಭಾ ಚುನಾವಣೆಗಳಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಬಿಕ್ಕಟ್ಟು ಉಂಟಾಗದಂತೆ ನೋಡಿಕೊಳ್ಳಲಾಗುವುದು ಎಂದು ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.

ಮಹಾರಾಷ್ಟ್ರದ ಬಾರಾಮತಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚುನಾವಣೆಗಳು ಹತ್ತಿರವಾದಂತೆ ಐ.ಎನ್.ಡಿ.ಐ.ಎ. ಸಹಭಾಗಿಗಳಲ್ಲಿ ಭಿನ್ನಮತ ಉಂಟಾಗುವುದನ್ನು ತಳ್ಳಿ ಹಾಕಲಾಗದು. ಆದರೆ, ಈ ವಿಷಯಗಳನ್ನು ಮೈತ್ರಿಕೂಟದ ತಟಸ್ಥ ನಾಯಕರ ಮೂಲಕ ಬಗೆಹರಿಸಿಕೊಳ್ಳಲಾಗುವುದು ಎಂದವರು ಹೇಳಿದರು.

# ಪೋಕ್ಸೋ ಕಾಯ್ದೆ : ಸಹಮತಿ ವಯಸ್ಸು ಸಡಿಲಿಕೆ ಬೇಡವೆಂದ ಆಯೋಗ

ನವದೆಹಲಿ, ಸೆ. 29 – ಪೋಕ್ಸೋ ಕಾಯ್ದೆಯಡಿ ಲೈಂಗಿಕ ಸಂಬಂಧಕ್ಕೆ ಸಹಮತಿ ನೀಡಲು ಇರುವ 18 ವರ್ಷದ ವಯೋಮಿತಿಯನ್ನು ಸಡಿಲಿಸಬಾರದು ಎಂದು ಕಾನೂನು ಆಯೋಗ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದೆ.

ಆದರೆ, 16- 18 ವರ್ಷ ವಯಸ್ಸಿನ ಮಕ್ಕಳು ಸಮ್ಮತಿಯ ಸಂಬಂಧಕ್ಕೆ ಮುಂದಾದ ಸಂದರ್ಭಗಳಲ್ಲಿ ಶಿಕ್ಷೆ ನೀಡುವ ಪ್ರಕರಣಗಳನ್ನು ನ್ಯಾಯಾಲಯದ ವಿವೇಚನೆಗೆ ನೀಡಬೇಕು ಎಂದೂ ಶಿಫಾರಸ್ಸು ಮಾಡಿದೆ.

ಹದಿಹರೆಯದವರು ಸಹಮತಿಯಿಂದ ಸಂಬಂಧ ಬೆಳೆಸಿದ ಪ್ರಕರಣಗಳಲ್ಲೂ ಪೋಕ್ಸೋ ಅನ್ವಯವಾಗುತ್ತದೆ. ಇದು ಇತ್ತೀಚಿನ ದಿನಗಳಲ್ಲಿ ತೊಡಕಿಗೆ ಕಾರಣವಾಗಿತ್ತು.

